ಜುಲೈ-ಸೆಪ್ಟೆಂಬರ್-2021
ಸಂಪುಟ :3 ಸಂಚಿಕೆ :3

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ
ಖಾಸಗಿ ಪ್ರಸಾರಕ್ಕಾಗಿ

July-September 2021

# KRUSHI VANA

*Quarterly news letter*

IAFT Bengaluru











## ಸುಭಾಷಿತ

"ಮರದ ಬೇರು ಅಗೋಚರ ಅದರ ಬೇರಿನ ಕಾರ್ಯವೆಲ್ಲಾ ತನಗಾಗಿ ಅಲ್ಲ, ಮರಕ್ಕಾಗಿ! ಅಂತೆಯೇ ರೈತರ ದುಡಿಮೆಯು ತಮಗಾಗಿ ಅಲ್ಲ, ದೇಶಕ್ಕಾಗಿ. ಆದರೆ ರೈತರ ಸಾಧನೆ, ಸಿದ್ಧಿ ಮಾತ್ರ ಮರದ ಬೇರಿನಂತೆ ಅಗೋಚರ!

– ಡಾ.ಎಂ.ಹೆಚ್. ಮರೀಗೌಡ

(ನಿವೃತ್ತ ನಿರ್ದೇಶಕರು ಕರ್ನಾಟಕ ತೋಟಗಾರಿಕಾ ಇಲಾಖೆ)


# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

Volume: 3 Issue: 3

ಸಂಪುಟ: ೩ ಸಂಚಿಕೆ: ೩



## ಸಂಪಾದಕೀಯ ಮಂಡಳಿ

### ಗೌರವ ಸಂಪಾದಕರು

ಶ್ರೀ ಎನ್. ಸಂಪಂಗಿ, ಭಾ.ಅ.ಸೇ(ನಿ)

### ಸಂಪಾದಕರು

ಶ್ರೀ ದೀಪಕ್ ಶರ್ಮ, ಭಾ.ಅ.ಸೇ(ನಿ)

### ಸಹ ಸಂಪಾದಕರು

ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

### ಸದಸ್ಯರು

ಶ್ರೀ ಎ.ಎಂ. ಅಣ್ಣಯ್ಯ, ಭಾ.ಅ.ಸೇ(ನಿ)

ಡಾ. ಎನ್. ಸ್ವಾಮಿ ರಾವ್

ಡಾ. ಎಮ್. ಮಹಾದೇವ ಮೂರ್ತಿ.

ಶ್ರೀಮತಿ ಶೋಭಾ ಎಚ್.ಜಿ.



## ಕಚೇರಿ ವಿಳಾಸ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)

ವನವಿಕಾಸ, ನೆಲಮಹಡಿ,

18ನೇ ಅಡ್ಡರಸ್ತೆ, ಮಲ್ಲೇಶ್ವರಂ,

ಬೆಂಗಳೂರು–560003

ದೂ: 080 23566126

Email: iaftbangalore@gmail.com

www.iaft.co.in


## ಮನವಿ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಕೃಷಿ ಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಹಾಗೂ ನಿವೃತ್ತ ಅಧಿಕಾರಿಗಳು, ಪ್ರಗತಿಪರ ರೈತರು ಹಾಗೂ ಕೃಷಿ ವಿಶ್ವ ವಿದ್ಯಾನಿಲಯದ ಹಾಲಿ ಹಾಗೂ ನಿವೃತ್ತ ಉಪ ಕುಲಪತಿಗಳು, ಪ್ರಾಧ್ಯಾಪಕರು, ರೈತರು ಸದಸ್ಯರಾಗಿರುತ್ತಾರೆ. ಈ ಹಿರಿಯ ಹಾಗೂ ಅನುಭವಿ ತಜ್ಞ–ರಿಂದ ಸರ್ಕಾರ, ಅರಣ್ಯ ಇಲಾಖೆ ಹಾಗೂ ರೈತರ ನಡುವೆ ಕೃಷಿ ಅರಣ್ಯ ಬೆಳೆಸುವಲ್ಲಿ ಸಲಹೆ ಸಹಕಾರ ನೀಡಲಾಗುತ್ತಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಸಂಸ್ಥೆಯ ಜಾಲತಾಣ (www.iaft.co.in)ದಲ್ಲಿರುವ ಅರ್ಜಿ ನಮೂನೆಯ ಪ್ರತಿಯನ್ನು ಪಡೆದು ಸದಸ್ಯತ್ವ ಶುಲ್ಕವನ್ನು IAFTಯ ಈ ಕೆಳಗಿನ ಅಕೌಂಟ್‌ಗೆ ಚೆಕ್/ಡಿಡಿ/NEFT ಮಾಡಲು ಕೋರಿದೆ. ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: CNRB0010424

**ಎ.ಎಂ. ಅಣ್ಣಯ್ಯ,**
ಕಾರ್ಯದರ್ಶಿ

## ಪರಿವಿಡಿ


| | ಲೇಖನ | ಪುಟ |
|---|---|---|
| 1 | ಜಾಗತಿಕ ಉಷ್ಣತೆಯ ನಿಯಂತ್ರಣಕ್ಕೆ ರೈತರ ಕೊಡುಗೆ (ಸಂಪಾದಕೀಯ) | 04 |
| 2 | ಹಾಲೆ – (Wrightia tinctoria) | 05 |
| 3 | ಕೃಷಿಗೆ ಒಲಿದ ನಿವೃತ್ತ ಅರಣ್ಯಾಧಿಕಾರಿ! | 07 |
| 4 | ಕೃಷಿ ಅರಣ್ಯ ಮಾದರಿಗಳು | 08 |
| 5 | ಕೃಷಿಅರಣ್ಯ ಮತ್ತು ಕೃಷಿ ಅಭಿವೃದ್ಧಿ | 12 |


## ಜಾಹೀರಾತು ವಿವರಗಳು

ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ಈ ಕೆಳಗಿನ ದರಗಳನ್ನು ನಿಗದಿ ಮಾಡಿದೆ. ಜಾಹೀರಾತು ನೀಡಲು ಕೋರಿದೆ.

| ಕ್ರ.ಸಂ | ವಿಸ್ತೀರ್ಣ | ಕಪ್ಪು–ಬಿಳುಪು ದರ (ರೂ.ಗಳಲ್ಲಿ) | ವರ್ಣಮಯ ದರ (ರೂ.ಗಳಲ್ಲಿ) | ಅವಧಿ |
|---|---|---|---|---|
| 1 | 1/4 ಪುಟ | 2500/– | 5000/– | 1 ವರ್ಷ |
| 2 | 1/2 ಪುಟ | 5000/– | 10000/– | 1 ವರ್ಷ |
| 3 | 1 ಪುಟ | 10000/– | 20000/– | 1 ವರ್ಷ |


Publisher: IAFT, Editor (ಸಂಪಾದಕರು): Dipak Sarmah, IFS (Retd), KRUSHI VANA, Quarterly News Letter, July-September-2021
Printed By: S.K. Chandrashekar, Rathna Offset Printers, #120, 1st Main Road, Cauvery Nadhi Road, Brindavana Nagar, Bangalore-560019

Volume: 3
Issue: 3

ಸಂಪಾದಕೀಯ....

# ಜಾಗತಿಕ ಉಷ್ಣತೆಯ ನಿಯಂತ್ರಣಕ್ಕೆ ರೈತರ ಕೊಡುಗೆ



ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಉಷ್ಣತೆಯ ಹೆಚ್ಚಳವು ಹೆಚ್ಚಿನ ಗಮನವನ್ನು ಸೆಳೆದಿದೆ. ಕಾರಣ ಇದರ ದುಷ್ಪರಿಣಾಮಗಳು ಎಲ್ಲರ ಮೇಲೂ ಹಾಗೂ ಎಲ್ಲಾ ಕ್ಷೇತ್ರಗಳಲ್ಲಿಯೂ ಕಂಡು ಬಂದಿದೆ. ಜಾಗತಿಕ ಉಷ್ಣತೆಯ ಹೆಚ್ಚಳವು ವಾತಾವರಣದಲ್ಲಿ ಹೆಚ್ಚಾಗಿರುವ ಹಸಿರುಮನೆ ಅನಿಲಗಳಾದ ಇಂಗಾಲದ ಡೈ ಆಕ್ಸೈಡ್ ($CO_2$), ಮೀಥೇನ್ ($CH_4$) ಮುಂತಾದವುಗಳಿಂದ. ಇವುಗಳನ್ನು ವಾತಾವರಣದಲ್ಲಿ ಕಡಿಮೆಗೊಳಿಸಲು ಇರುವ ಮಾರ್ಗವೆಂದರೆ ಪಳೆಯುಳಿಕೆ ಇಂಧನಗಳ ಉರಿಸುವುದನ್ನು ಕಡಿತಗೊಳಿಸುವುದು ಬಹು ಮುಖ್ಯ ಮಾರ್ಗೋಪಾಯವಾಗಿದೆ ಹಾಗೂ ಮತ್ತೊಂದು ಬಹು ಮುಖ್ಯ ಉಪಾಯವೆಂದರೆ ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್ ಪ್ರಮಾಣವನ್ನು ಕಡಿಮೆಗೊಳಿಸುವುದಾಗಿದೆ. ಎಲ್ಲರಿಗೂ ತಿಳಿದಿರುವಂತೆ, ಮರಗಳು ವಾತಾವರಣದಲ್ಲಿಯ ಇಂಗಾಲದ ಡೈ ಆಕ್ಸೈಡ್ ಹೀರಿಕೊಂಡು ವಾತಾವರಣಕ್ಕೆ ಪ್ರಾಣವಾಯುವಾದ ಆಮ್ಲಜನಕವನ್ನು ಬಿಡುಗಡೆಗೊಳಿಸುತ್ತವೆ. ಈ ರೀತಿಯಲ್ಲಿ ಮರಗಳು ಇಂಗಾಲದ ಖಜಾನೆಗಳಾಗಿವೆ. ಕೃಷಿಗೆ ಬಳಸಲಾಗದ ಎಲ್ಲಾ ಕೃಷಿ ಭೂಮಿಯಲ್ಲಿ ಹಾಗೂ ಇನ್ನಿತರೆ ಕಾರಣಗಳಿಂದ ಖಾಲಿ ಇರುವ ಎಲ್ಲಾ ಸ್ಥಳಗಳಲ್ಲಿ ಮರಗಳನ್ನು ಬೆಳೆಸುವುದರಿಂದ ವಾತಾವರಣದಲ್ಲಿಯ ಇಂಗಾಲವನ್ನು ಹೀರಿಕೊಳ್ಳಲು ಸಾಧ್ಯವಾಗುವುದು. ಆದರೆ ಮರಗಳನ್ನು ಬೆಳೆಸಲು ಸ್ಥಳದ ಅಭಾವವಿದೆ. ಏಕೆಂದರೆ ಆಹಾರ ಉತ್ಪಾದನೆಗೆ ಹೆಚ್ಚಿನ ವಿಸ್ತಾರದ ಕೃಷಿ ಭೂಮಿಯ ಅವಶ್ಯಕತೆಯಿದೆ. ಆದರೆ ಮಣ್ಣು ಸಹ ಇಂಗಾಲದ ಖಜಾನೆಯಾಗಿದೆ. ಆದ್ದರಿಂದ ಮಣ್ಣಿನಲ್ಲಿ ಇಂಗಾಲವನ್ನು ಹಿಡಿದಿಡುವ ಸಾಮರ್ಥ್ಯವನ್ನು ಹೆಚ್ಚಿಸಲು ಮಣ್ಣಿನಲ್ಲಿ ಸಾವಯವ ಅಂಶವನ್ನು ಹೆಚ್ಚಿಸಬೇಕಿದೆ. ಕರ್ನಾಟಕ ರಾಜ್ಯದಲ್ಲಿ ಶೇ.65ರಷ್ಟು ಭೌಗೋಳಿಕ ಪ್ರದೇಶವನ್ನು ಕೃಷಿ ಭೂಮಿಯು ಆವರಿಸಿದೆ. ಕರ್ನಾಟಕದ ಪೂರ್ವ ಮೈದಾನ ಪ್ರದೇಶ ಹಾಗೂ ಒಳನಾಡು ಕರ್ನಾಟಕದಲ್ಲಿ ಇದರ ಪ್ರಮಾಣವು ಇನ್ನೂ ಹೆಚ್ಚಿಗೆಯಿದೆ. ಅಂದರೆ ಶೇ.80 ರಿಂದ 90ರಷ್ಟಿದೆ. ಕೃಷಿ ಭೂಮಿಯಲ್ಲಿ ಇಂಗಾಲದ ಪ್ರಮಾಣವನ್ನು ಹೆಚ್ಚಿಗೆ ಮಾಡುವುದರ ಮುಖಾಂತರ ಇಂಗಾಲದ ಡೈ ಆಕ್ಸೈಡ್ ಅನ್ನು ಆಶ್ಚರ್ಯಕರವಾದ ರೀತಿಯಲ್ಲಿ ಹೀರಿಕೊಳ್ಳುವಂತೆ ಮಾಡಬಹುದು. ಮಣ್ಣಿನಲ್ಲಿ ಇಂಗಾಲದ ಪ್ರಮಾಣವನ್ನು ಹೆಚ್ಚಿಗೆ ಮಾಡಲು ಅನೇಕ ಮಾರ್ಗಗಳಿವೆ. ಅವುಗಳೆಂದರೆ ಕೃಷಿ ಬೆಳೆಯ ಅವಶೇಷಗಳನ್ನು ಬೆಂಕಿಯಲ್ಲಿ ಸುಡದೆ ಮಣ್ಣಿನಲ್ಲಿ ಸೇರ್ಪಡೆಗೊಳಿಸುವುದು, ಮಣ್ಣನ್ನು ಮುಚ್ಚುವಂತ ಬೆಳೆ ಬೆಳೆಯುವುದು, ಕೃಷಿ ಅರಣ್ಯ, ಇಳಿಜಾರಿಗೆ ಅಡ್ಡಲಾಗಿ ಬೆಳೆಬೆಳೆಯುವುದು, ಟೆರೆಸಿಂಗ್, ಮಣ್ಣು ಮತ್ತು ನೀರು ಸಂರಕ್ಷಣಾ ವಿಧಾನಗಳನ್ನು ಅಳವಡಿಸುವುದು, ಸಸಾರಜನಕವನ್ನು ಭೂಮಿಯಲ್ಲಿ ಶೇಖರಿಸುವ ಬೆಳೆಗಳನ್ನು ಬೆಳೆಯುವುದು, ಸಾವಯವ ಕೃಷಿ, ಸಾವಯವ ಗೊಬ್ಬರದ ಬಳಕೆ, ಮಣ್ಣನ್ನು ಎಲೆಗಳು ಮತ್ತು ರೆಂಬೆಕೊಂಬೆಗಳಿಂದ ಮುಚ್ಚುವುದು ಮುಂತಾದ ವಿಧಾನಗಳನ್ನು ಅನುಸರಿಸುವುದು. ಈ ವಿಧಾನಗಳ ಬಹುಮುಖ್ಯ ಉದ್ದೇಶವೆಂದರೆ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದು ಮತ್ತು ನೀರನ್ನು ಹಿಡಿದಿಡುವ ಸಾಮರ್ಥ್ಯವನ್ನು ಹೆಚ್ಚಿಸುವುದರ ಮುಖಾಂತರ ಉತ್ಪಾದಕತೆ ಮತ್ತು ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸುವುದಾಗಿದೆ.

ಈ ರೀತಿಯಾಗಿ ನೀತಿ ನಿರೂಪಕರು ಬೇರೆ ಬೇರೆ ವೇದಿಕೆಗಳಲ್ಲಿ ಮೇಲಿನ ವಿಷಯಗಳನ್ನು ಚರ್ಚಿಸುವುದನ್ನು ಮುಂದುವರಿಸುವುದರ ಮುಖಾಂತರ ಜಾಗತಿಕ ಉಷ್ಣತೆಯನ್ನು ತಹಬಂದಿಗೆ ತರಬಹುದಾಗಿದೆ. ಪ್ರತಿ ರೈತರು ತನ್ನದೇ ಆದ ಸಣ್ಣ ಪ್ರಮಾಣದಲ್ಲಿ ಕೊಡುಗೆಯನ್ನು ಯಾವುದೇ ಸಂದೇಹವಿಲ್ಲದೆ ನೀಡುವುದರ ಮುಖಾಂತರ ಪರಿಣಾಮವನ್ನು ಕಡಿಮೆಗೊಳಿಸಲು ಸಹಕಾರಿಯಾಗಿದೆ. ಅಪಾರ ಸಂಖ್ಯೆಯ ರೈತರುಗಳು ಬಹಳಷ್ಟು ಕೃಷಿ ಭೂಮಿಯನ್ನು ಹೊಂದಿರುವುದನ್ನು ಪರಿಗಣಿಸಿದಲ್ಲಿ ಒಟ್ಟಾರೆಯಾಗಿ ಮಣ್ಣಿನಲ್ಲಿ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲಿರುವುದು "ರೈತರ" ಪರಿಶ್ರಮದ ಕೊಡುಗೆಯಾಗಿದೆ. ತನ್ಮೂಲಕ ಜಾಗತಿಕ ಉಷ್ಣತೆಯ ನಿಯಂತ್ರಣವು ಮಹತ್ವದ್ದಾಗಿದೆ.

**– ಶ್ರೀ ದೀಪಕ್ ಶರ್ಮ**
**ಸಂಪಾದಕರು**

***

# ಕಲ್ಪವೃಕ್ಷ ತೆಂಗು

ಪ್ರತೀ ವರ್ಷದ ಸೆಪ್ಟೆಂಬರ್ 2ನೇ ದಿನವನ್ನು ಭಾರತ ಸೇರಿದಂತೆ ತೆಂಗಿನಕಾಯಿ ಬೆಳೆಯುವ ಸುಮಾರು 18 ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿರುವ ಇಂಡೋನೇಷ್ಯಾದ ಜಕಾರ್ತಾದಲ್ಲಿದಲ್ಲಿ ಮುಖ್ಯ ಕಛೇರಿಯನ್ನು ಹೊಂದಿರುವ ಏಷ್ಯನ್ ಮತ್ತು ಪೆಸಿಫಿಕ್ ತೆಂಗಿನಕಾಯಿ ಸಮುದಾಯ (ಎಪಿಸಿಸಿ) ಮತ್ತು ಅದರ ಸದಸ್ಯ ರಾಷ್ಟ್ರಗಳು ವಿಶ್ವ ತೆಂಗಿನ ದಿನವನ್ನಾಗಿ ಆಚರಿಸುತ್ತವೆ. ಭಾರತದ ತೆಂಗು ಅಭಿವೃದ್ಧಿ ಮಂಡಳಿಯು ಇದನ್ನು ಕೇರಳ, ತಮಿಳುನಾಡು, ಕರ್ನಾಟಕ, ಗೋವಾ, ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ, ಒಡಿಶಾ ಮೊದಲಾದ ವಿವಿಧ ರಾಜ್ಯಗಳಲ್ಲಿ ಪ್ರಚಾರ ಮಾಡುತ್ತಿದೆ.

ವೈಜ್ಞಾನಿಕವಾಗಿ ಹೇಳಬೇಕೆಂದರೆ ತೆಂಗಿನಕಾಯಿ ತಾಳೆ ಮರದ ಕುಟುಂಬವಾದ ಅರೆಕೇಸಿಗೆ ಸೇರಿದೆ. ಕೊಕೊಸ್ ಕುಲದ ಏಕೈಕ ಜೀವಂತ ಜಾತಿ ತೆಂಗಿನಕಾಯಿ. ಇದು ಕೊಕೊಸ್ ನ್ಯೂಸಿಫೆರಾ ಪಾಮ್ನ ಪ್ರಬುದ್ಧ ಹಣ್ಣು. ಇದು ದಕ್ಷಿಣ ಮತ್ತು ಆಗ್ನೇಯ ಏಷ್ಯಾ ಮತ್ತು ಪೆಸಿಫಿಕ್ ದ್ವೀಪಗಳ ಜನರ ಜೀವನದ ಅನಿವಾರ್ಯ ಮತ್ತು ಅವಿಭಾಜ್ಯ ಆಹಾರ ಪದಾರ್ಥವಾಗಿದೆ. ಇದು ಉಷ್ಣವಲಯದ ಹವಾಮಾನದಲ್ಲಿ



ಚೆನ್ನಾಗಿ ಬೆಳೆಯುತ್ತದೆ. ಹೆಚ್ಚು ತೇವಾಂಶವುಳ್ಳ, ಮರಳು ಮಿಶ್ರಿತ ಲವಣಯುಕ್ತ ಸಮೃದ್ಧ ಕರಾವಳಿ ಪ್ರದೇಶಗಳಲ್ಲಿ ಹೆಚ್ಚು ಫಲವತ್ತಾಗಿ ಬೆಳೆಯುತ್ತದೆ. ಸುಮಾರು 60–75 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ತೆಂಗಿನ ಮರ ಬಹಳ ದೀರ್ಘಾವಧಿಯ ಬೆಳೆಯಾಗಿದ್ದು ಒಂದು ಮರದ ಆಯಸ್ಸು ಅಜಮಾಸು 75 ರಿಂದ 100 ವರ್ಷಗಳಾಗಿರುತ್ತದೆ. ಇದೇ ಕಾರಣಕ್ಕೇ **ನನ್ನನ್ನು ನೀನು 7 ವರ್ಷ ಚೆನ್ನಾಗಿ ಜತನದಿಂದ ಬೆಳೆಸು, ನಾನು ನಿನ್ನನ್ನು 70 ವರ್ಷಗಳು ನೋಡಿಕೊಳ್ಳುತ್ತೇನೆ** ಎಂಬ ಗಾದೆ ಮಾತಿದೆ. ಒಂದು ತೆಂಗಿನ ಮರವು ಪ್ರತೀ ವರ್ಷ ಸುಮಾರು 100 ತೆಂಗಿನ ಕಾಯಿಯನ್ನು ನೀಡುತ್ತದೆ.

ತೆಂಗು ಭಾರತೀಯರ ಜೀವನ ಮತ್ತು ಸಂಪ್ರದಾಯಗಳ ಅವಿಭಾಜ್ಯ ಅಂಗವಾಗಿದೆ. ಇಂದಿಗೂ ಎಲ್ಲಾ ಶುಭ ಕಾರ್ಯಕ್ರಮಗಳಲ್ಲಿ ಚಪ್ಪರ ಹಾಕುವುದೇ ತೆಂಗಿನ ಗರಿಗಳಿಂದಲೇ. ಇನ್ನು ಪೂಜೆಯ ಸಮಯದಲ್ಲಿ ನೈವೇದ್ಯಕ್ಕೆ ತೆಂಗಿನಕಾಯಿ ಬಳಸಿದರೆ ಅದೇ ತೆಂಗಿನಕಾಯಿಯನ್ನು ಅಡುಗೆಗೂ ಉಪಯೋಗಿಸಿಕೊಳ್ಳುತ್ತಾರೆ. **ಇಂಗು ಮತ್ತು ತೆಂಗು ಇದ್ದರೆ ಮಂಗವೂ ಚೆನ್ನಾಗಿ ಅಡುಗೆ ಮಾಡುತ್ತದೆ** ಎನ್ನುವ ಗಾದೆ ಮಾತೂ ಇದೆ. ಬಹುತೇಕ ಸಾಂಪ್ರದಾಯಿಕ ಅಡುಗೆ ಮತ್ತು ಸಿಹಿತಿಂಡಿಗಳನ್ನು ತೆಂಗಿನಕಾಯಿ ಮತ್ತು ಕೊಬ್ಬರಿ ಇಲ್ಲದೆ ಊಹಿಸಿಕೊಳ್ಳಲೂ ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಅವಿಭಾಜ್ಯ ಅಂಗವಾಗಿದೆ.

ಕಾವೇರಿ ಜಲಾನಯನ ಮತ್ತು ಅಚ್ಚುಕಟ್ಟು ಪ್ರದೇಶದಲ್ಲಿ ತೆಂಗನ್ನು ರೈತರು ಲಾಭದಾಯಕ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಎಕರೆಗೆ 40 ತೆಂಗಿನ ಮರಗಳ ನಡುವೆ ಮಿಶ್ರ ಬೆಳೆಯಾಗಿ ಬಾಳೆ, ಅಡಿಕೆ, ಕಬ್ಬು, ತರಕಾರಿ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯಬಹುದು. ■

# ಹಾಲೆ – (Wrightia tinctoria)

✍ ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿವೃತ್ತ) E-mail: shivanandamurthyifs@gmail.com ದೂ: 94481 26246

ಕರ್ನಾಟಕದಲ್ಲಿ ಚನ್ನಪಟ್ಟಣವು ಗೊಂಬೆಗಳ ನಾಡೆಂದು ಪ್ರಖ್ಯಾತಿ ಪಡೆದ ಸ್ಥಳವಾಗಿದೆ. ಚನ್ನಪಟ್ಟಣದ ಮಕ್ಕಳ ಆಟಿಕೆಗಳು ಮತ್ತು ಗೊಂಬೆಗಳು ಪ್ರಪಂಚದಾದ್ಯಂತ ಹೆಸರು ಪಡೆದಿವೆ ಮತ್ತು ಪರಿಸರ ಸ್ನೇಹಿಯಾಗಿವೆ. ಇದಕ್ಕೆ ಮೂಲ ಕಾರಣ 'ಹಾಲೆ' ಮರ. ಇದು ಈ ಸ್ಥಳದ ಆರ್ಥಿಕ ನೋಟವನ್ನು ಬದಲಾಯಿಸಿರುವುದಲ್ಲದೆ, ಸಾವಿರಾರು ಜನರಿಗೆ ಉದ್ಯೋಗವನ್ನು ಒದಗಿಸಿದೆ.

ಹಾಲೆ ಮರ – wrightia tinctoria (Roxb) ವು ಅಪೋಸೈನೇಸಿ ಕುಟುಂಬಕ್ಕೆ ಸೇರಿದ್ದು, ಸ್ಥಳೀಯವಾಗಿ ಹಾಲೆ/ಬೆಪ್ಪಾಲೆ/ಕೊಡುಮುರ್ಕಿ/ಕೊಡಸಿಗೆ/ಅಜಮುರ/ಅಲಿಗಿಲಿ/ಕಲಾಕೂಡು/ಪಾಲ/ಪಾಲೈ ಎಂದು ಕರೆಯಲಾಗುವುದು. ಇದು ಕರ್ನಾಟಕದ ಎಲೆಯುದುರುವ ಅರಣ್ಯಗಳಲ್ಲಿ ಕಂಡುಬರುವ ಸಾಮಾನ್ಯ ಜಾತಿಯ ಮರ. ಆದರೆ ಈ ಮರವು ರಾಜ್ಯದ ಎಲೆಯುದುರುವ ಅರಣ್ಯಗಳು ಮತ್ತು ಕ್ಷೀಣಿತ ಅರಣ್ಯಗಳಲ್ಲಿ ಎಲ್ಲೆಡೆ ಕಂಡುಬರುತ್ತದೆ. ಇಷ್ಟೇ ಅಲ್ಲದೆ ತೇವಾಂಶಭರಿತ ಎಲೆಯುದುರುವ ಅರಣ್ಯಗಳಿರುವ ಜಿಲ್ಲೆಗಳಾದ ಉತ್ತರಕನ್ನಡ, ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು, ಕೊಡಗು ಜಿಲ್ಲೆಗಳ ಅರಣ್ಯಗಳಲ್ಲಿ ಅರಣ್ಯದ ಎರಡು ಛಾವಣಿಯವರೆಗೂ ಬೆಳೆಯುತ್ತದೆ. ಈ ಮರವನ್ನು ಮೂಲತಃ ನೀರಿಯಂ ಟಿಂಟ್ಕೋರಿಯಂ ಎಂದು ಭಾರತದ ಸಸ್ಯಶಾಸ್ತ್ರದ ಪಿತಾಮಹರಾದ ಡಾ.ವಿಲಿಯಮ್ ರಾಕ್ಸ್‌ಬರ್ಗ್ (1751–1815)ರವರು ವಿವರಿಸಿರುವರು. ಇವರೊಬ್ಬ ಸ್ಕಾಟಿಷ್ ದೇಶದ ಸರ್ಜನ್ ಹಾಗೂ ಸಸ್ಯಶಾಸ್ತ್ರಜ್ಞರಾಗಿದ್ದು, ಕಲ್ಕತ್ತಾದ ಬಟಾನಿಕಲ್ ಗಾರ್ಡನ್‌ನಲ್ಲಿ ಅಧೀಕ್ಷಕರಾಗಿ ಸುಮಾರು 20 ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸಿರುವರು (1793–1813) ತದನಂತರದಲ್ಲಿ ಈ ಜಾತಿಯ ಮರವನ್ನು ರೈಟಿಯ ಜೀನಸ್ ನಡಿಯಲ್ಲಿ ಸ್ಕಾಟಿಷ್ ಸಸ್ಯಶಾಸ್ತ್ರಜ್ಞರಾದ ಡಾ.ರಾಬರ್ಟ್ ಬ್ರೌನ್ (1773–1858) ರವರು ವಿವರಿಸಿರುವರು ಮತ್ತು ಇದನ್ನು ರೈಟಿಯ ಟಿಂಟ್ಕೋರಿಯಾ ಎಂದು ಪುನರ್ ನಾಮಕರಣ ಮಾಡಲಾಯಿತು. ಈ ರೈಟಿಯಾ ಹೆಸರನ್ನು ಸ್ಕಾಟಿಷ್ ಫಿಸಿಷಿಯನ್ ಮತ್ತು ಸರ್ಜನ್‌ರವರಾದ ಡಾ.ವಿಲಿಯಂ ರೈಟ್ (1735–1819) ರವರ ಸ್ಮರಣಾರ್ಥವಾಗಿ ಪುನರ್ ನಾಮಕರಣ ಮಾಡಲಾಯಿತು.

ಹಾಲೆ ಮರವು ಸಣ್ಣದ್ದರಿಂದ ಮಧ್ಯಮ ಗಾತ್ರದ ಎಲೆಯುದುರುವ ಮರ, 8 ರಿಂದ 12 ಮೀಟರ್ ಎತ್ತರದವರೆಗೂ ಬೆಳೆಯುತ್ತದೆ. ಈ ಮರವನ್ನು ದಂತದ ಮರವೆಂದು ಸಹ ಕರೆಯಲಾಗುವುದು. ಕಾರಣ ಮರದ ಬಣ್ಣವು ಆನೆಯ ದಂತದ ತರಹದ ಬಣ್ಣದಿಂದ ಕೂಡಿರುವುದರಿಂದ. ಡಾ. ವಿಲಿಯಂ ರಾಕ್ಸ್‌ಬರ್ಗ್‌ರವರು ಈ ಮರದ ಬಿಳಿಯ ಬಣ್ಣವು ನಾನು ನೋಡಿರುವ ಹಾಗೂ ಆನೆಯ ದಂತದ ಬಣ್ಣಕ್ಕೆ ಸಮನಾದದ್ದೆಂದು ವರ್ಣಿಸಿರುವರು. ಬಾಂಬೆ ಪ್ರೆಸಿಡೆನ್ಸಿಯ ಗೆಜೆಟಿಯರ್‌ನಲ್ಲಿ [ಉತ್ತರ ಕೆನರಾ ಡಿಸ್ಟ್ರಿಕ್ಟ್ – ವಾಲ್ಯೂಮ್–15 (1883)], ಹಾಲೆ ಮರದ ಚೌಬೀನೆಯನ್ನು "ಸುಂದರವಾದದ್ದೆಂದು", ಬಿಳಿ ಮತ್ತು ಗಟ್ಟಿಯಾದ ಎಳೆಗಳಿಂದ ಕೂಡಿರುವುದೆಂದು ವರ್ಣಿಸಲಾಗಿದೆ. ನಯವಾದ ರಚನೆಯ ಚೌಬೀನೆಯು ಕೆತ್ತನೆಯ ಕೆಲಸಕ್ಕೆ ಮತ್ತು ಟರ್ನಿಂಗ್ ಕೆಲಸಕ್ಕೆ ಹೇಳಿ ಮಾಡಿಸಿದಂತಹದ್ದೆಂದು ವಿವರಿಸಲಾಗಿದೆ. ಚನ್ನಪಟ್ಟಣವು ಹಾಲೆ ಮರದ ಆಟಿಕೆಗಳು ಮತ್ತು ಇತರೆ ಉತ್ಪನ್ನಗಳಿಗೆ ಹೆಸರುವಾಸಿಯಾಗಿದ್ದು, ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿದೆ.

ಹಾಲೆ ಮರಕ್ಕೆ ಭಾರತವೇ ತವರೂರಾಗಿದ್ದರೂ ಪ್ರಪಂಚದಾದ್ಯಂತ ಬಹಳ ವಿಸ್ತಾರದಿಂದ ಶ್ರೀಲಂಕಾ, ನೇಪಾಳ್, ಬಾಂಗ್ಲಾದೇಶ, ಮೈನಮಾರ್, ವಿಯೆಟ್ನಾಂ, ಆಸ್ಟ್ರೇಲಿಯಾ ಮುಂತಾದೆಡೆ ಹರಡಿಕೊಂಡಿವೆ. ಭಾರತ ದೇಶದೊಳಗಡೆ ಭಾರತದ ಪರ್ಯಾಯ ದ್ವೀಪದಲ್ಲಿ ಸರ್ವೇ ಸಾಮಾನ್ಯವಾಗಿ ಕಂಡು ಬರುವುದು. ಇದರ ಬೆಳವಣಿಗೆಯು ನಿಧಾನ ಗತಿಯಿಂದ ಮಧ್ಯಮ ಗತಿಯಿಂದ ಕೂಡಿದ್ದು, 5–8 ವರ್ಷಗಳ ಮರಗಳು ಹೂ ಬಿಡಲು ಪ್ರಾರಂಭಿಸುತ್ತವೆ. ಈ ಮರವು ಒಣ ಹವೆ, ಅರೆ ಒಣ ಹವೆ ಮತ್ತು ತೇವಾಂಶಭರಿತ ಅರಣ್ಯ ಪ್ರದೇಶಗಳಲ್ಲಿ 1200 ಮೀಟರ್ ಸಮುದ್ರಮಟ್ಟದ ಎತ್ತರದವರೆಗೂ ಬೆಳೆಯಬಲ್ಲದು ಹಾಗೂ ಸಾಮಾನ್ಯವಾಗಿ 400 ರಿಂದ 2500 ಮಿ.ಮೀ. ಮಳೆ ಬೀಳುವ ಪ್ರದೇಶಗಳಲ್ಲಿ ಮತ್ತು $170^{0}$ ಸೆಲ್ಸಿಯಸ್‌ನಿಂದ $250^{0}$ ಸೆಲ್ಸಿಯಸ್ ಉಷ್ಣತೆಯ ಪ್ರದೇಶಗಳಲ್ಲಿ ಕಂಡುಬರುವುದು. ಇದು ವಿವಿಧ ಮಣ್ಣುಗಳಲ್ಲಿ ಅದರಲ್ಲೂ ವಿಶೇಷವಾಗಿ ಒಣ ಮರಳು ಮಿಶ್ರಿತ ಭೂಮಿಯಲ್ಲಿ, ಬೆಟ್ಟಗಳ ಪ್ರದೇಶದಲ್ಲಿ ಹಾಗೂ ಕೊಳ್ಳಗಳಲ್ಲಿ ಚೆನ್ನಾಗಿ ಬೆಳೆಯುವುದು. ಇದು ಕಲ್ಲು ಮಿಶ್ರಿತ ಭೂಮಿ ಅಥವಾ ಬಂಡೆಗಳಿಂದ ಕೂಡಿರುವ ಭೂಮಿಯಲ್ಲಿ ಸಹ ಬೆಳೆಯುವುದು. ಇದು ಉತ್ತಮವಾದ ಕೂಳೆ ಬೆಳೆಗಳು ಮತ್ತು ಬೇರುಗಳಿಂದ ಹೊರಡುವ ಚಿಗುರುಗಳಿಂದ ಸಹ ಬೆಳೆಯುವುದು. ಇದರ ಬೆಳವಣಿಗೆಗೆ ಸೂರ್ಯನ ಬೆಳಕು ಅವಶ್ಯವಾಗಿ ಬೇಕಿದ್ದರೂ, ಸ್ವಲ್ಪ ನೆರಳಿನಲ್ಲಿ ಮತ್ತು ತೇವಾಂಶಭರಿತ ಅರಣ್ಯಗಳ ಕೆಳಹಂತದ ಬೆಳೆಯಾಗಿ ಸಹ ಬೆಳೆಯುವುದು. ಒಣ ಎಲೆಯುದುರುವ ಮತ್ತು ಕ್ಷೀಣಿತ ಅರಣ್ಯಗಳಲ್ಲಿಯ ತೆರೆದ ಪ್ರದೇಶಗಳು ಮತ್ತು ಸಮನಾದ ಬೆಳವಣಿಗೆ ಇಲ್ಲದೆ ಇರುವೆಡೆ ಅತ್ಯುತ್ತಮವಾಗಿ ಕಂಡುಬರುವುದು. ಈ ಮರದ ಮುಖ್ಯ ಗುಣಲಕ್ಷಣಗಳೆಂದರೆ, ಬಿಳಿ ಬಣ್ಣದ ಹಾಲಿನಂತಹ ರಸ ಹೊರ ಬರುವುದನ್ನು ಮರದ ಎಲ್ಲಾ ಭಾಗಗಳಲ್ಲೂ ಅಂದರೆ ತೊಗಟೆಗಳಲ್ಲೂ ಸೇರಿದಂತೆ, ಎಲೆಗಳು, ರೆಂಬೆ–ಕೊಂಬೆಗಳಿಂದ ಬಸಿಯುವುದು, ಎಲೆಗಳ ಕೆಳಭಾಗವು ಮೃದುವಾದ ಮತ್ತು ಸಮುದ್ರ ಹಸಿರಿನ ಬಣ್ಣದಿಂದ ಕೂಡಿದ್ದು, ಸುವಾಸನೆಯುಕ್ತ ಹೂಗಳು ಮಂಜುಗಡ್ಡೆಯ ತುಣುಕುಗಳಂತೆ ಹೊರ ಹೊಮ್ಮುವವು ಮತ್ತು ಕಾಯಿಗಳು ಜೊಡಿ ಕೊಂಬಿನಾಕಾರದಿಂದ ಕೂಡಿದ್ದು, ಕಪ್ಪು–ಹಸಿರಿನ ಹೊರಮೈ ಹೊಂದಿದ್ದು ಬಿಳಿ ಬಣ್ಣದ ಚುಕ್ಕೆಗಳಿರುವವು. ಕಾಯಿಯು 15–20 ಸೆಂ.ಮೀ. ಉದ್ದ ಮತ್ತು 0.5 ಸೆಂ.ಮೀ ದಪ್ಪ ಹಾಗೂ ತುದಿಗಳು ಕೂಡಿಕೊಂಡಿರುವವು. ಈ ಮರವು ಜಮೀನಿನ ಸುತ್ತಲಿನ ದಂಡೆಗಳಲ್ಲಿ, ಬೇಲಿಗಳಲ್ಲಿ ಬೆಳೆಯುವುದು. ಏಕೆಂದರೆ ರೈತರಿಗೆ ಈ ಮರದ ಮಹತ್ವ ತಿಳಿದಿರುವುದರಿಂದ ಸ್ವಾಭಾವಿಕವಾಗಿ ಬೆಳೆಯುವ ಮರಗಳಿಗೆ ಬೆಳೆಯಲು ಅವಕಾಶ ಕಲ್ಪಿಸಿಕೊಡುವರು. ಈ ಮರದ ಎಲೆಗಳು, ರೆಂಬೆ–ಕೊಂಬೆಗಳೂ ಕೃಷಿ ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವ ಸಂಪನ್ಮೂಲವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಹಾಲೆ ಮರವನ್ನು ಗೊಂಬೆಗಳ (ಆಟಿಕೆಗಳು) ತಯಾರಿಕೆಯಲ್ಲಿ ಹೆಚ್ಚಾಗಿ ಉಪಯೋಗಿಸುವುದರಿಂದ, ಚನ್ನಪಟ್ಟಣದಲ್ಲಿ ಇದೊಂದು ಉದ್ಯಮವಾಗಿ ಬೆಳೆದಿದೆ. ಈ ಹಿಂದಿನ ವರ್ಷಗಳಲ್ಲಿ ಇದನ್ನೂ ಬೇರೆ–ಬೇರೆ ರೀತಿಯಲ್ಲಿ ಉಪಯೋಗಿಸಲಾಗುತ್ತಿತ್ತು. ಸುಮಾರು 200 ವರ್ಷಗಳ ಹಿಂದೆ ಇದೊಂದು ಪ್ರಮುಖವಾದ ಮರದ ದಿಮ್ಮಿಗಳನ್ನು ಒದಗಿಸುವ ಮರವಾಗಿತ್ತೆಂದು ಡಾ.ಬುಕನಾನ್‌ರವರು 1800–1801 ವರ್ಷಗಳಲ್ಲಿ ಮೈಸೂರು ರಾಜ್ಯದಲ್ಲಿ ಪ್ರವಾಸ ಮಾಡಿರುವಾಗ ಈ ಮರವನ್ನು ಗುರುತಿಸಿ ವಿವರಿಸಿರುವರು. ಇವರೊಬ್ಬ ಸ್ಕಾಟಿಷ್ ಸರ್ಜನ್ ಮತ್ತು ಸಸ್ಯಶಾಸ್ತ್ರಜ್ಞರಾಗಿದ್ದರು. ಇವರು ಈ ಮರದ ಉಪಯುಕ್ತತೆಯ ಬಗ್ಗೆ (ಮರ ಹಾಲೆಯ) (nerium tinetorium, Rox) ತಿಳಿಸಿರುವರು. ಇವರು ಈ ಮರವನ್ನು ಬಿಡದಿಯಲ್ಲಿ ಕಂಡಂತೆ, ಇದು ಕೆಲವು ಸಂದರ್ಭಗಳಲ್ಲಿ ದೊಡ್ಡ ಮರವಾಗಿ ಬೆಳೆಯುವುದು ಹಾಗೂ ಮರವನ್ನು ಹಲಗೆಗಳಾಗಿ ಉಪಯೋಗಿಸಲಾಗುತ್ತಿತ್ತೆಂದು ತಿಳಿಸಿರುವರು. ಅವರು ಇದೇ ಜಾತಿಯ ಮರವನ್ನು ಸಾವನದುರ್ಗ ಅರಣ್ಯ ಪ್ರದೇಶದಲ್ಲಿ ನೋಡಿ ಇದರ ಉಪಯೋಗದ ಬಗ್ಗೆ ವಿವರಿಸಿರುವರು. "ಸ್ಥಳೀಯ ಜನರು ಈ ಮರವನ್ನು ಬಣ್ಣ ಹಾಕಲು ಉಪಯೋಗ ಮಾಡುತ್ತಿದ್ದರು ಹಾಗೂ ಇದರ ಮರವನ್ನು (ದಿಮ್ಮಿ) ಗಟ್ಟಿ ಜಾತಿಯದಾಗಿದ್ದು ಮತ್ತು ದಂತದಂತೆ ಬಿಳಿ ಬಣ್ಣದಿಂದ ಕೂಡಿರುವುದಾಗಿ, ಇದನ್ನು ಸಣ್ಣ ಪೀಠೋಪಕರಣಗಳ ತಯಾರಿಕೆ. ಅಂದರೆ ಮಂಚ ಹಾಗೂ ಕುರ್ಚಿಗಳನ್ನು ತಯಾರಿಸಲಾಗುತ್ತಿತ್ತು.

ಹಾಲೆ ಮರವನ್ನು ಸಾಮಾನ್ಯವಾಗಿ ಮರ–ಮುಟ್ಟಾಗಿ ಉಪಯೋಗಿಸಲಾಗುತ್ತಿತ್ತು ಹಾಗೂ ಇದೊಂದು ಪ್ರಮುಖ ಬಣ್ಣ ನೀಡುವ ಮರವಾಗಿತ್ತೆಂದು, ಈ ಬಣ್ಣವನ್ನು "ಕಪಿಲಿಪೋಡಿ" – ಎನ್ನಲಾಗುತ್ತಿದ್ದು, ಬಟ್ಟೆ ತಯಾರಿಕಾ ಉದ್ಯಮದಲ್ಲಿ ಬಳಸಲಾಗುತ್ತಿತ್ತು. ಚನ್ನಪಟ್ಟಣ ಮತ್ತು ಸಮೀಪದ ಪ್ರದೇಶಗಳಲ್ಲಿ ಬೆಳೆಯುವ ಹಾಲೆ ಮರಗಳನ್ನು ಬಣ್ಣದ ತಯಾರಿಕೆಯಲ್ಲಿ ಉಪಯೋಗಿಸುತ್ತಿದ್ದರು. ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಅರಣ್ಯ ಪ್ರದೇಶದಲ್ಲಿ ಅಪಾರ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಮರಗಳಿಂದ ತಯಾರಿಸಿದ ಕಪಿಲಪೋಡಿ

ಮುಂದಿನ ಪುಟಕ್ಕೆ...

ಬಣ್ಣವನ್ನು ಬೆಂಗಳೂರು ಮತ್ತು ಕೋಲಾರದ ಬಟ್ಟೆ ತಯಾರಿಕಾ ಕೈಗಾರಿಕೆಗಳಲ್ಲಿ ಬಳಸಲಾಗುತ್ತಿತ್ತು.

ಹಿಂದಿನ ವರ್ಷಗಳಲ್ಲಿ ಈ ಮರಗಳಿಂದ ತಯಾರಿಸಿದ "ಕಪಿಲಪೋಡಿ" ಬಣ್ಣಕ್ಕೆ ಅತಿ ಹೆಚ್ಚಿನ ಬೇಡಿಕೆಯಿದ್ದುದ್ದರಿಂದ, ಇಲ್ಲಿನ ಜನರು ಸುಸ್ಥಿರ ರೀತಿಯಲ್ಲಿ ನಿರಂತರವಾಗಿ ಬಣ್ಣದ ಬೇಡಿಕೆಯನ್ನು ಪೂರೈಸಲು ಎಚ್ಚರಿಕೆಯಿಂದ ಮರಗಳನ್ನು ರಕ್ಷಿಸುತ್ತಿದ್ದರು ಹಾಗೂ ಬಲಿತ ದೊಡ್ಡ ಗಾತ್ರದ ಮರಗಳನ್ನು ಮಾತ್ರ ಕಟಾವು ಮಾಡುತ್ತಿದ್ದರು. ಆದರೆ ಮಾನವ ನಿರ್ಮಿತ ಬಣ್ಣದ ತಯಾರಿಕೆಯಿಂದಾಗಿ, ಕಪಿಲ ಪೋಡಿ ಬಣ್ಣಕ್ಕೆ ಬೇಡಿಕೆ ಕಡಿಮೆಯಾಗಿರುವುದರಿಂದ, ಜನರು ಸಣ್ಣ–ಸಣ್ಣ ಮರಗಳನ್ನು ಸಹ, ಮರದ ಬೇಡಿಕೆಯನ್ನು ಪೂರೈಸಲು ಕಟಾವು ಮಾಡುತ್ತಿದ್ದಾರೆ. ಸಣ್ಣ ಮತ್ತು ಮಧ್ಯಮ ಗಾತ್ರದ ಮರಗಳು ಹೆಚ್ಚಾಗಿ ಲಭ್ಯವಿರುವುದರಿಂದ ಚನ್ನಪಟ್ಟಣದಲ್ಲಿ ಆಟಿಕೆ ತಯಾರಿಕೆ ಉದ್ಯಮವು ಬೃಹದಾಕಾರವಾಗಿ ಬೆಳೆದಿದ್ದು, ಹೆಸರುವಾಸಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಪೀಠೋಪಕರಣಗಳ ತಯಾರಿಕೆಗೆ ಬಳಸುವ ದಿಮ್ಮಿಗಳನ್ನು ಪಡೆಯುವಂತಹ ಹಾಲೆ ಮರಗಳ ಸಂಖ್ಯೆ ಬಹಳ ಕಡಿಮೆಯಾಗಿದೆ. ಹೇಳಬೇಕೆಂದರೆ ಹಾಲೆ ಮರದ ಲಭ್ಯತೆಯು ತುಂಬಾ ಕಡಿಮೆಯಾಗಿರುವುದರಿಂದ ಆಟಿಕೆಗಳ ತಯಾರಿಕೆಗಾರರು ಮರವನ್ನು ತೂಕದ ರೂಪದಲ್ಲಿ ಕೊಂಡುಕೊಳ್ಳುತ್ತಿರುವರು.

ಹಾಲೆ ಮರವು ಇದೊಂದು ಪ್ರಮುಖ ಔಷಧೀಯ ಸಸ್ಯವಾಗಿದ್ದು, ಇದರಿಂದ "ಸ್ವೇತ ಕುಟಜ" ಎಂಬ ಆರ್ಯುವೇದಿಕ್ ಔಷಧಿ ತಯಾರಿಸುವರು. ಇದರ ತೊಗಟೆ ಮತ್ತು ಬೀಜಗಳನ್ನು ಪೈಲ್ಸ್ ರೋಗದ ಚಿಕಿತ್ಸೆಯಲ್ಲಿ, ರಕ್ತಸ್ರಾವ ನಿಲ್ಲಿಸಲು, ಕುಷ್ಟರೋಗ, ಹುಳಗಳ ನಿಯಂತ್ರಿಸಲು, ಹಸಿವನ್ನು ನೀಗಿಸಲು, ನೋವು ನಿವಾರಣೆಗಾಗಿ, ಅತಿಸಾರ ಹಾಗೂ ಬೇದಿ ನಿಯಂತ್ರಿಸಲು ಬಳಸಲಾಗುವುದು. ಸಿದ್ಧ ಔಷಧಿಯ ಕ್ರಮದಲ್ಲಿ, ತೊಗಟೆ, ಎಲೆ ಮತ್ತು ಬೀಜಗಳನ್ನು ಪಿತ್ತ ಮತ್ತು ವಾತ, ಚರ್ಮದ ರೋಗ, ಎಕ್ಸಿಮಾ, ಅತಿಸಾರ, ಸೋರಿಯಾಸಿಸ್ ಮತ್ತು ಗುಪ್ತಾಂಗ ರೋಗದ ಚಿಕಿತ್ಸೆಯಲ್ಲಿ ಬಳಸುವರು. ಹಾಲೆ ಒಂದು ಮುಖ್ಯವಾದ ಜಾತಿಯ ಮರವಾಗಿದ್ದರೂ, ಅರಣ್ಯ ಇಲಾಖೆಯ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿಲ್ಲ. ರಾಜ್ಯದ ಕೆಲವೇ ಕೆಲವು ಸಸ್ಯಕ್ಷೇತ್ರಗಳಲ್ಲಿ ಬಹಳ ಕಡಿಮೆ ಸಂಖ್ಯೆಯ ಸಸಿಗಳನ್ನು ಬೆಳೆಸಲಾಗುತ್ತಿದೆ. ಕಾರಣ ಇದರ ವಿಭಿನ್ನತೆ ಮತ್ತು ಚದುರಿದಂತೆ ಸಣ್ಣ ಗಾತ್ರದ ಮರಗಳಿರುವುದರಿಂದ, ಇದೊಂದು ಮರದ ದಿಮ್ಮಿಗಳನ್ನು ನೀಡುವ ಮತ್ತು ಮರವಾಗಿ ಇತರೆ ಬಳಕೆಗೆ ಬರುವ ಇದರ ಸಂಪೂರ್ಣ ಸಾಮರ್ಥ್ಯವು ಗಣನೆಗೆ ಬಂದಿರುವುದಿಲ್ಲ. ಹೇಳಬೇಕೆಂದರೆ ಹಾಲೆ ಮರಕ್ಕಿರುವ ಅತಿಯಾದ ಬೇಡಿಕೆಯಿಂದಾಗಿ ಸಣ್ಣ–ಸಣ್ಣ ಹಾಗೂ ಬಲಿಯದೇ ಇರುವ ಮರಗಳನ್ನೇ ಕಟಾವು ಮಾಡಲಾಗುತ್ತಿದೆ ಹಾಗೂ ಇದನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಯಲು ಬಿಡುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಗುಡಿ ಕೈಗಾರಿಕೆಯಲ್ಲಿ ಕರಕುಶಲ ವಸ್ತುಗಳ ತಯಾರಿಕೆಗಾಗಿ ಹೆಚ್ಚಿನ ಬೇಡಿಕೆ ಸೃಷ್ಠಿಯಾಗಿರುವುದರಿಂದ. ಇದನ್ನು ಬೆಳೆಯಲು ಸ್ವಲ್ಪ ಆಸಕ್ತಿ ವಹಿಸಲಾಗಿದೆ. ಇದೊಂದು ಗಟ್ಟಿ ಜಾತಿಯ ಮರವಾಗಿದ್ದು, ರಾಜ್ಯದ ತೇವಾಂಶಭರಿತ ಎಲೆಯುದುರುವ ಕಾಡುಗಳಲ್ಲಿ, ಒಣ ಎಲೆಯುದುರುವ ಕಾಡುಗಳಲ್ಲಿ ಮತ್ತು ಕ್ಷೀಣಿತ ಅರಣ್ಯ ಪ್ರದೇಶಗಳಲ್ಲಿ ಉತ್ತಮವಾಗಿ ಬೆಳೆಯುವುದರಿಂದ, ಈ ಮರವನ್ನು ಅರಣ್ಯ ಪ್ರದೇಶಗಳಲ್ಲಿ ಬೀಜಗಳನ್ನು ಬಿತ್ತುವುದರ ಮುಖಾಂತರ ಹಾಗೂ ಸಸಿಗಳನ್ನು ನಾಟಿ ಮಾಡುವುದರ ಮುಖಾಂತರ ಬೆಳೆಸಲು ಹೆಚ್ಚಿನ ಆದ್ಯತೆ ನೀಡಬೇಕಿದೆ. ಈ ಮರವನ್ನು ಪೂರ್ವ ಮೈದಾನ ಪ್ರದೇಶದ ಅರಣ್ಯಗಳಲ್ಲಿ ಹಾಗೂ ಒಳನಾಡು ಕರ್ನಾಟಕದ ಅರಣ್ಯಗಳಲ್ಲಿ ಬೆಳೆಸಲು ವಿಶೇಷವಾದ ಆಸಕ್ತಿಯನ್ನು ವಹಿಸಬೇಕಿದೆ. ಏಕೆಂದರೆ ಈ ಪ್ರದೇಶಗಳಲ್ಲಿ ಮರಗಳನ್ನು ಬೆಳೆಸುವುದೊಂದು ಸವಾಲಾಗಿದೆ. ಇದೊಂದು ಒಣ ಎಲೆಯುದುರುವ ಮತ್ತು ಕ್ಷೀಣಿತ ಅರಣ್ಯಗಳಲ್ಲಿ ಬೆಳೆಯುತ್ತಿರುವ ಸ್ಥಳೀಯ ಜಾತಿಯ ಮರವಾಗಿರುವುದರಿಂದ ಹಾಲೆ ಮರವು ಎಂತಹ ಬರಗಾಲ ಹಾಗೂ ಬರಡು ಭೂಮಿಯಲ್ಲಾದರೂ ಬೆಳೆಯುವ ಸಾಮರ್ಥ್ಯ ಹೊಂದಿದೆ. ಹಾಲೆ ಮರವು ಕೃಷಿ ಅರಣ್ಯದಲ್ಲಿ ಬೆಳೆಸಬಹುದಾದ ಮತ್ತು ಆಶಾದಾಯಕವಾದ ಮರವಾಗಿದ್ದು, ಮರದ ದಿಮ್ಮಿಗಳಿಗಾಗಿ, ಹಸಿರೆಲೆ ಗೊಬ್ಬರವಾಗಿ ಮತ್ತು ಔಷಧೀಯ ಸಸ್ಯವಾಗಿ ಬೆಳೆಸಲು ಅರ್ಹ ಜಾತಿಯ ಮರವಾಗಿದೆ. ಇದರ ಮರಕ್ಕೆ ತಕ್ಷಣದಲ್ಲಿ ಮಾರುಕಟ್ಟೆ ಗುಡಿಕೈಗಾರಿಕೆಯಲ್ಲಿ ಕರಕುಶಲ ವಸ್ತುಗಳ ತಯಾರಿಕೆಗಾಗಿ ಬೇಡಿಕೆಯಿದ್ದು, ಜೊತೆಗೆ ಬೇರೆ–ಬೇರೆ ರೀತಿಯ ಬಳಕೆಯಲ್ಲೂ ಉಪಯೋಗಿಸಬಹುದಾದ ಅಂದರೆ ಪೀಠೋಪಕರಣಗಳ ತಯಾರಿಕೆಯಲ್ಲಿ ಮತ್ತು ಕೃಷಿ ಉಪಕರಣಗಳನ್ನು ಸುಂದರವಾಗಿಸುವಲ್ಲಿ ಬಳಸಬಹುದಾಗಿದೆ. ■

***

# ಕೊಬ್ಬರಿ ದಿವ್ಯೌಷಧ



ನಮ್ಮ ಪೂರ್ವಜರು ತೆಂಗನ್ನು ನಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿಸಿ ಶುಭ ಮತ್ತು ಅಶುಭ ಕಾರ್ಯದಲ್ಲಿ ತೆಂಗು ಮತ್ತು ತೆಂಗಿನ ಉತ್ಪನ್ನಗಳನ್ನು ನಮ್ಮ ಜೀವನದ ಅವಿಭಾಜ್ಯವನ್ನಾಗಿಸಿದ್ದರು.

ಕೊಬ್ಬರಿಯಂತೂ ಮನೆಯಲ್ಲಿ ಹಿರಿಯರು ಕಿರಿಯರು ಎನ್ನುವ ಬೇಧವಿಲ್ಲದೇ ಪ್ರತಿಯೊಬ್ಬರೂ ತಿನ್ನಲು ಬಯಸುವ ಪದಾರ್ಥವಾಗಿದ್ದು, ಕೊಲೆಸ್ಟ್ರಾಲ್, ನಾರಿನಾಂಶ, ಕಾಪರ್, ಸೆಲೆನಿಯಂ ಎನ್ನುವ ಪೋಷಕಾಂಶಗಳಿರುವ ಕಾರಣ ಇದನ್ನು ಸೂಪರ್ ಫುಡ್ ಎಂದು ಕರೆದರೂ ತಪ್ಪಾಗುವುದಿಲ್ಲ. ಹಾಗಾಗಿ ಪ್ರತಿದಿನ 20 ರಿಂದ 25 ಗ್ರಾಂ ನಷ್ಟು ಒಣಕೊಬ್ಬರಿಯನ್ನು ಜಗಿದು ತಿನ್ನುವ ಅಭ್ಯಾಸವನ್ನು ರೂಡಿಸಿಕೊಳ್ಳುವ ಮೂಲಕ ನಿಶ್ಶಕ್ತಿ, ಆಯಾಸ, ಗಂಟುಗಳಲ್ಲಿ ನೋವು, ಸೊಂಟ ನೋವು, ರಕ್ತಹೀನತೆ, ಅಜೀರ್ಣ, ಕೂದಲು ಉದುರುವುದು, ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೇ ಜ್ಞಾಪಕ ಶಕ್ತಿಯನ್ನೂ ವೃದ್ಧಿಸಲು ಸಹಾಯ ಮಾಡುತ್ತದೆ.

ಒಣಕೊಬ್ಬರಿ ಪ್ರತಿನಿತ್ಯ ಆಹಾರದಲ್ಲಿ ಬಳಸುವುದರಿಂದ ನಮ್ಮ ದೇಹದ ಮೂಳೆಗಳು ಬಲಶಾಲಿ ಆಗುವುದಲ್ಲದೇ, ಕೊಬ್ಬರಿಯಲ್ಲಿರುವ ನೈಸರ್ಗಿಕವಾದ ಎಣ್ಣೆಯ ಅಂಶ ಮತ್ತು ಖನಿಜಗಳು ಕೀಲುಗಳಿಗೆ ಅತ್ಯವಶ್ಯಕವಾದ ಕೀಲೆಣ್ಣೆಯನ್ನು ವೃದ್ಧಿಸುವುದರಲ್ಲಿ ಸಹಾಯ ಮಾಡುತ್ತದೆ. ಈ ಮೂಲಕ, ಮೂಳೆಗಳ ಗಂಟುಗಳ ಘರ್ಷಣೆಯನ್ನು ಕಡಿಮೆ ಮಾಡುವುದಲ್ಲದೇ, ಸವೆಯುವಿಕೆಯನ್ನು ತಡೆಯುತ್ತದೆ ಮತ್ತು ಮೂಳೆಗಳು ಕಟಕಟ ಎಂದು ಶಬ್ದಮಾಡುವುದನ್ನು ನಿವಾರಿಸುತ್ತದೆ ಮತ್ತು ಮೂಳೆಗಳನ್ನು ಬಲಶಾಲಿಯನ್ನಾಗಿಸುತ್ತದೆ. ಒಣ ಕೊಬ್ಬರಿಯಿಂದ ದೊರೆಯುವ ಖನಿಜಾಂಶಗಳು ದೇಹದಲ್ಲಿ ಬೇಗನೆ ಸೇರಿಕೊಳ್ಳುವ ಮೂಲಕ ಆರ್ಥರೈಟಿಸ್ ನಂತಹ ತೊಂದರೆಯಿಂದ ಪಾರು ಮಾಡುತ್ತದೆ.

ಇನ್ನು ಮಕ್ಕಳಿನ ಮೆದಳನ್ನು ಚುರುಕಾಗಿಸಲು ಮತ್ತು ಜ್ಞಾಪಕ ಶಕ್ತಿಯನ್ನು ಹೆಚ್ಚಿಸಲು ಕೊಬ್ಬರಿ ಸಹಾಯಕಾರಿಯಾಗಿದೆ. ಕೊಬ್ಬರಿಯಲ್ಲಿ ಹೇರಳವಾದ ನಾರಿನ ಅಂಶವಿರುವ ಕಾರಣ ವಯಸ್ಸಾದ ನಂತರ ಕಾಡುವ ಅಜೀರ್ಣತೆ, ಮಲಬದ್ಧತೆ ಮತ್ತು ಮೂಲವ್ಯಾಧಿ ರೋಗದ ಸಮಸ್ಯೆಯನ್ನು ಕೂಡ ಸರಿಪಡಿಸ ಬಹುದಾಗಿದೆ. ಪ್ರತೀ ತಿಂಗಳ ಋತುಸ್ರಾವದಿಂದಾಗಿ ಮಹಿಳೆಯರಲ್ಲಿ ಸಾಮಾನ್ಯವಾಗಿ ರಕ್ತಹೀನತೆಯ ಸಮಸ್ಯೆ ಹೆಚ್ಚಾಗಿ ಕಾಡುತ್ತದೆ. ರಕ್ತಹೀನತೆಯ ಸಮಸ್ಯೆಯಿಂದಾಗಿ ನಿಶ್ಶಕ್ತಿಯಿಂದಾಗಿ ತಲೆಸುತ್ತು, ತಲೆನೋವನ್ನು ಅನುಭವಿಸುತ್ತಾರೆ. ಒಣ ಕೊಬ್ಬರಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿಣ ಅಂಶವಿರುವ ಕಾರಣ ಅದು ಶರೀರದಲ್ಲಿ ರಕ್ತವನ್ನು ಹೆಚ್ಚಿಸಲು ಪರಿಣಾಮಕಾರಿಯಾಗಿದೆ. ಮಹಿಳೆಯರ ಕೂದಲು ಉದುರುವ ಸಮಸ್ಯೆಗೂ ಕೊಬ್ಬರಿ ಉತ್ತಮ ಔಷಧವಾಗಿದೆ.

ದೇಹದಲ್ಲಿ ಸೆಲೆನಿಯಂ ಕೊರತೆಯಿಂದಾಗಿ ಬಹುತೇಕರಲ್ಲಿ ಥೈರಾಯ್ಡ್ ಸಮಸ್ಯೆ ಉಂಟಾಗುತ್ತದೆ. ಒಣ ಕೊಬ್ಬರಿಯಲ್ಲಿ ಸೆಲೆನಿಯಂ ಅಧಿಕ ಪ್ರಮಾಣದಲ್ಲಿ ಇರುವ ಕಾರಣ, ಹೈಪರ್ ಥೈರಾಯ್ಡ್ ಅಥವಾ ಹೈಪೋ ಥೈರಾಯ್ಡ್ ಸಮಸ್ಯೆಯಿಂದ ಬಳಲುತ್ತಿರುವವರು, ಪ್ರತಿನಿತ್ಯ ಒಣಕೊಬ್ಬರಿಯನ್ನು ಸೇವಿಸುವ ಮೂಲಕ ತಮ್ಮ ಥೈರಾಯ್ಡ್ ಹಾರ್ಮೋನನ್ನು ಸರಿಯಾದ ಪ್ರಮಾಣದಲ್ಲಿ ಇಟ್ಟುಕೊಳ್ಳ ಬಹುದಾಗಿದೆ.

ಇನ್ನು ನಿದ್ರಾಹೀನತೆಯಿಂದ ಬಳಲುತ್ತಿರುವವರು, ರಾತ್ರಿ ಮಲಗುವ ಮೊದಲು ಒಂದು ಲೋಟ ಬಿಸಿ ಹಾಲಿಗೆ ಎರಡು ಚಮಚ ತುರಿದ ಒಣ ಕೊಬ್ಬರಿಯನ್ನು ಹಾಕಿ ಕುಡಿಯುವುದರಿಂದ ಚೆನ್ನಾಗಿ ನಿದ್ರೆ ಬರುತ್ತದೆ. ರಕ್ತದಲ್ಲಿರುವ ಅಧಿಕ ಗ್ಲುಕೋಸ್ ಮಟ್ಟವನ್ನು ಕಡಿಮೆ ಮಾಡುವ ಕಾರಣ, ಕೊಬ್ಬರಿಯ ಸೇವನೆ ಮಧುಮೇಹಿಗಳಿಗೆ ವರದಾನವಾಗಿದೆ.

ಒಣಕೊಬ್ಬರಿ ಒಂದು ಒಳ್ಳೆಯ ಆ್ಯಂಟಿ ಬಯಾಟಿಕ್ ಆಗಿರುವ ಕಾರಣ ಯಾವುದೇ ತರಹದ ಗಾಯಗಳಾಗಲೀ ಅಥವಾ ತುರಿಕೆ ಮತ್ತು ಚರ್ಮ ಸಂಬಂಧಿತ ಸಮಸ್ಯೆಗಳಿಗೆ ಕೊಬ್ಬರೀ ಎಣ್ಣೆ ರಾಮಬಾಣವಾಗಿದೆ. ಕೊಬ್ಬರೀ ಎಣ್ಣೆ ಹಚ್ಚುವುದರಿಂದ ಎಂತಹ ಗಾಯದ ಕಲೆಯೂ ಕೆಲವೇ ಕೆಲವು ದಿನಗಳಲ್ಲಿ ಮಾಯವಾಗುತ್ತದೆ. ಪ್ರತೀ ನಿತ್ಯ ತಲೆಗೆ ಕೊಬ್ಬರೀ ಎಣ್ಣೆಯನ್ನು ಹಚ್ಚಿಕೊಳ್ಳುವುದರಿಂದ ದೇಹವನ್ನು ತಂಪಾಗಿ ಇಟ್ಟುಕೊಳ್ಳಬಹುದಲ್ಲದೇ, ಕಣ್ಣನ್ನೂ ತಂಪಾಗಿಸುತ್ತದೆ. ■

# ಕೃಷಿಗೆ ಒಲಿದ ನಿವೃತ್ತ ಅರಣ್ಯಾಧಿಕಾರಿ!

✍ ಚಿನ್ನಸ್ವಾಮಿ ವಡ್ಡಗೆರೆ ಮೊ.93804 77210 (ಕೃಪೆ: ಮಣ್ಣಿನ ಮಕ್ಕಳು: ಬಂಗಾರದ ಮನುಷ್ಯರು-ಬೆಳಕಿನ ಬೇಸಾಯದ ಕಥಾನಕ)



ಮುತ್ತದೆ ರಾಗ, ಕೃಷಿರಂಗ ಬಿಕ್ಕಟ್ಟಿನಲ್ಲಿದೆ. ಹವಾಮಾನ ಪರಿಸ್ಥಿತಿ, ಪುನರಾವರ್ತನೆಯಾಗುತ್ತಿರುವ ಬರ, ಅಕಾಲಿಕ ಮಳೆ ರೈತರನ್ನು ಹೈರಾಣಾಗಿಸಿದೆ. ತಾಪಮಾನ ಏರಿಕೆಯಾಗುತ್ತಿರುವುದೆ ಇದಕ್ಕೆಲ್ಲಾ ಕಾರಣವಾಗಿದೆ. ಹೆಚ್ಚು ಮರಗಿಡಗಳನ್ನು ಬೆಳೆಸುವುದು, ಅರಣ್ಯಾಧಾರಿತ ಕೃಷಿ ಮಾಡುವುದೊಂದೆ ಇದಕ್ಕಿರುವ ಪರಿಹಾರ ಅಂತ ಪರಿಸರ ತಜ್ಞರು ಹೇಳುತ್ತಲೆ ಬಂದಿದ್ದಾರೆ.

ಆದರೆ ರೈತರು ಮರ ಬೆಳೆಸಿ ಜೊತೆಯಲ್ಲಿ ಕೃಷಿ ಮಾಡಿ ಎಂದರೆ ಯಾರೂ ತಯಾರಿಲ್ಲ. ಶೀಘ್ರ ಆದಾಯ ತಂದುಕೊಡದ ಮರ ಬೆಳೆಸುವ ಬದಲು ಬಯಲಿನಲ್ಲೆ ಬಿತ್ತಿ ಬೆಳೆಯುವ ಅಲ್ಪಾವಧಿ ಬೆಳೆಗಳನ್ನು ಬೆಳೆಯಲು ಮುಂದಾಗುತ್ತಿದ್ದಾರೆ.

ಇಂತಹ ವಿಷಮ ಸನ್ನಿವೇಶದಲ್ಲೂ ಅರಣ್ಯಾಧಾರಿತ ಕೃಷಿ ಮಾಡಿಯೂ ನಿರಂತರವಾಗಿ ಹೇಗೆ ಆದಾಯಗಳಿಸಬಹುದು ಎನ್ನುವುದನ್ನು ಪ್ರಾತ್ಯಕ್ಷಿಕೆ ಮಾಡಿ ತೋರಿಸಿದ್ದಾರೆ ನಿವೃತ್ತ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಆನಸೋಸಲು ಮಂಚೇಗೌಡ ಅಣ್ಣಯ್ಯ.

ಮಂಡ್ಯ ತಾಲೂಕಿನ ಕೆರಗೋಡು ಸೇರಿದಂತೆ ಆನಸೋಸಲು ಮತ್ತು ಹುಲಿವಾನ ಗ್ರಾಮಕ್ಕೆ ಸೇರಿದ ಜಮೀನಿನಲ್ಲಿ ಅರಣ್ಯಾಧಾರಿತ ಕೃಷಿ ಮಾಡುತ್ತಿರುವ ನಿವೃತ್ತ ಎಪಿಸಿಸಿಎಫ್ ಎ.ಎಂ.ಅಣ್ಣಯ್ಯ ಸುಸ್ಥಿರ, ನಿರಂತರ ಆದಾಯ ತಂದುಕೊಡುವ ಮಾದರಿಗಳನ್ನು ಮಾಡುವ ಮೂಲಕ ಮಂಡ್ಯ ಜಿಲ್ಲೆಯ ರೈತರಿಗೆ ಹೊಸ ಮಾದರಿಯೊಂದನ್ನು ತೋರಿಸಿಕೊಟ್ಟಿದ್ದಾರೆ.

ಸದಾ ಕ್ರಿಯಾಶೀಲರಾಗಿರುವ ಅಣ್ಣಯ್ಯ ನೌಕರಿಯಿಂದ ನಿವೃತ್ತರಾದ ನಂತರ ಕೃಷಿಕರಿಗೆ ನೆರವಾಗುವ ಮೂಲಕ ಸಮಾಜಕ್ಕೆ ಮಾದರಿಯಾಗಿದ್ದಾರೆ. ಬೆಂಗಳೂರಿನ (ಇನ್ಸಿಟ್ಯೂಷನ್ ಆಫ್ ಆಗ್ರೋ ಫಾರೆಸ್ಟ್ರಿ ಫಾರ್ಮರ್ಸ್ ಅಂಡ್ ಟೆಕ್ನಾಲಜಿಸ್ಟ್ಸ್) ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಕಾರ್ಯದರ್ಶಿಯಾಗಿ, ಮಂಡ್ಯ ಜಿಲ್ಲಾ ಕೃಷಿ ವಿಜ್ಞಾನ ಪದವೀಧರರ ಸಂಘದ ಉಪಾಧ್ಯಕ್ಷರಾಗಿ ರೈತರಿಗೆ ನೆರವಾಗುತ್ತಿದ್ದಾರೆ.

ಕೆರಗೋಡು ಬಳಿ ತಮ್ಮ ಮೂರು ಎಕರೆ ಪ್ರದೇಶದಲ್ಲಿ ತೇಗ ಜೊತೆಗೆ ಪಪ್ಪಾಯ ನಡುವೆ ಹುರುಳಿ, ಮೆಣಸಿನಕಾಯಿ ಬೆಳೆದಿದ್ದು, ಹನ್ನೆರಡು ಕ್ವಿಂಟಾಲ್ ಹುರುಳಿ ಬಂದಿದೆ. ಹುಲಿವಾನ ಗ್ರಾಮದ ಬಳಿ ಐದು ಎಕರೆ ಕಪ್ಪು ಮಣ್ಣಿನಲ್ಲಿ ಹೆಬ್ಬೇವು, ನುಗ್ಗೆ ಜೊತೆಗೆ ದನಿಯಾ (ಕೊತ್ತಂಬರಿ), ಕಡಲೆ (ಬೆಂಗಾಲ್ ಗ್ರಾಮ್) ಬೆಳೆದು ಆದಾಯ ಗಳಿಸಿದ್ದಾರೆ.

ಹೀಗೆ ಅರಣ್ಯ ಕೃಷಿ ಮಾಡುತ್ತಲೆ ಆರು ತಿಂಗಳ ನಂತರ ನುಗ್ಗೆ ಮತ್ತು ಪಪ್ಪಾಯಿಯಿಂದ ವರ್ಷ ಮೂರ್ತಿ ಆದಾಯಗಳಿಸಬಹುದು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.

ಬೆಂಗಳೂರಿನ ಜಿಕೆವಿಕೆಯಲ್ಲಿ ನಡೆದ ಕೃಷಿಮೇಳವನ್ನು ಮುಗಿಸಿಕೊಂಡು ವಾಪಸ್ ಮೈಸೂರಿಗೆ ಬರುತ್ತಿರಬೇಕಾದರೆ ಅಣ್ಣಯ್ಯನವರ ನೆನಪಾಯಿತು. ಮಂಡ್ಯದಲ್ಲಿ ಗೇರು ಗಿಡಗಳನ್ನು ತರಲು ಹೋಗಿದ್ದಾಗ ತಮ್ಮ ಅರಣ್ಯ ಆಧಾರಿತ ಕೃಷಿಯ ಪ್ರಯೋಗದ ಬಗ್ಗೆ ಮಾಹಿತಿ ನೀಡಿದ್ದರು. ಕಾಡುಕೃಷಿಯ ಜೊತೆಗೆ ಬೇಳೆಕಾಳು, ತರಕಾರಿ, ಪಶುಸಂಗೋಪನೆಯಂತಹ ಉಪ ಕಸುಬುಗಳನ್ನು ಮಾಡಲು ಆಸಕ್ತಿ ಇದ್ದ ನಮಗೆ ಅಣ್ಣಯ್ಯನವರ ಇಂತಹ ಪ್ರಾತ್ಯಕ್ಷಿಕೆಯನ್ನು ನೋಡಬೇಕು ಎನಿಸಿ ಕೊಪ್ಪ ಮಾರ್ಗವಾಗಿ ಕೆರೆಗೋಡು ಕಡೆಗೆ ಕಾರು ತಿರುಗಿಸಿದೆವು.ಸಂಜೆ ಸಮಯ ಸೂರ್ಯ ಮುಳುಗುವ ಹೊತ್ತು. ಆನಸೋಸಲು ಹಾದಿ ನಮಗೆ ಗೊತ್ತಿರಲಿಲ್ಲ. ಕೊಪ, ಹಲ್ಲೆಗೆರೆ, ಚಿಕ್ಕಬಳ್ಳಿ, ದ್ಯಾಪಸಂದ್ರ, ಬೆಸ್ತರಕೊಪ್ಪಲು, ಕೆರೆಗೋಡು ಸುತ್ತಿಕೊಂಡು ಕವಲಿ ಏರಿಯಾ ಮೇಲೆ ಕಷ್ಟಪಟ್ಟು ಅಣ್ಣಯ್ಯನವರ ಕಾಡುಕೃಷಿ ತೋಟ ತಲುಪಿದಾಗ ನಮ್ಮ ದಣಿವು, ಬೇಸರವೆಲ್ಲಾ ಮಾಯ! ಮೈಸೂರು – ಮಂಡ್ಯ ಕಡೆಯಿಂದ ಹೋದರೆ ಹುಲಿವಾನ ಮಾರ್ಗದಲ್ಲಿ ಕೆರಗೋಡಿನಲ್ಲಿರುವ ಅಣ್ಣಯ್ಯನವರ ಕಾಡುಕೃಷಿ ತೋಟ ಸಿಗುತ್ತದೆ.

ಸೇನೆಯ ಕವಾಯತಿನಂತೆ ಹನ್ನೆರಡು ಅಡಿಗೂ ಮೇಲೆ ನೇರವಾಗಿ ಬೆಳೆದು ನಿಂತ ತೇಗದ ಗಿಡಗಳು, ನಡುವೆ ಹಣ್ಣು ಬಿಟ್ಟು ನಿಂತ ಪಪ್ಪಾಯ, ಎರಡು ಸಾಲುಗಳ ಮಧ್ಯೆ ಹುರುಳಿ. ನಾವು ನೋಡಿದಾಗ ಹದಿಮೂರು ತಿಂಗಳ ತೋಟ ಎಂದರೆ ನಂಬಲೂ ಸಾಧ್ಯವಾಗದ ಕಾಡಿನಂತೆ ಬೆಳೆದು ನಿಂತಿತ್ತು. ದೀರ್ಘಾವಧಿಗೆ ಹಣ ತಂದುಕೊಡಬಲ್ಲ ತೇಗದ ಮರಗಳು, ಅದರ ನಡುವೆ ಏಳು ತಿಂಗಳಿನಿಂದಲೇ ಆದಾಯ ತರುವ ಪಪ್ಪಾಯ ಜೊತೆಗೆ ತೊಂಬತ್ತು ದಿನದಲ್ಲಿ ಬೆಳೆಯುವ ಹುರುಳಿ, ನಮಗೆಲ್ಲಾ ಅಚ್ಚರಿ.

ಅಣ್ಣಯ್ಯನವರನ್ನು ಕೇಳಿದರೆ "ನೀವು ನಂಬಬೇಕು. ಇದು ಹದಿಮೂರು ತಿಂಗಳ ತೇಗದ ಗಿಡಗಳು, ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಪಶುಸಂಗೋಪನೆ ಈ ನಾಲ್ಕನ್ನು ಒಂದೆ ಕಡೆ ಮಾಡಬಹುದು ಎನ್ನುವುದನ್ನು ನಮ್ಮ ಜಿಲ್ಲೆಯ ಜನರಿಗೆ ತೋರಿಸಿಕೊಡಲು ಹೀಗೆ ಪ್ರಾತ್ಯಕ್ಷಿಕೆ ಮಾಡಿದ್ದೇವೆ" ಎಂದರು.

ಆಹಾರ ಬೆಳೆಗಳನ್ನು ಬೆಳೆದುಕೊಳ್ಳಬೇಕಾದ ಅಗತ್ಯ ಒಂದು ಕಡೆ ಅರಣ್ಯ ಬೆಳೆಸಬೇಕಾದ ಅನಿವಾರ್ಯತೆ ಮತ್ತೊಂದು ಕಡೆ ಎರಡೂ ಸವಾಲನ್ನು ಸಮನಾಗಿ ಎದುರಿಸುವ ಕೃಷಿ ಪದ್ಧತಿಯ ಪರಿಚಯ ಇದು. ಮಂಡ್ಯ ಜಿಲ್ಲೆಯ ರೈತರು ಬರಿ ಬತ್ತ, ಕಬ್ಬು ಬೆಳೆದು ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡಿದ್ದಾರೆ. ಪರ್ಯಾಯ ಮಾರ್ಗಗಳ ಬಗ್ಗೆ ಅವರಿಗೆ ಜಾಗೃತಿ ಮೂಡಿಸಲು ನಾವು ಹೀಗೆ ಮುಂದಾಗಿದ್ದೇವೆ ಎನ್ನುತ್ತಾರೆ. ಮತ್ತೆ ಈಗ ಪಪ್ಪಾಯ, ನುಗ್ಗೆಯಿಂದ ಆದಾಯಗಳಿಸಿ ತೇಗದ ಸಾಲಿನಲ್ಲಿ ಶ್ರೀಗಂಧ ಹಾಕಿದ್ದಾರೆ. ಸಾಧಾರಣವಾಗಿ ಬಿಸಿಲು ನೆಲವನ್ನು ಮುಟ್ಟುತ್ತಿರುವುದರಿಂದ ಇನ್ನೂ ಎರಡು ವರ್ಷ ಬೇಳೆಕಾಳು, ತರಕಾರಿ ಬೆಳೆದುಕೊಳ್ಳಬಹುದು ಎನ್ನುತ್ತಾರೆ.

ಕೊಳವೆ ಬಾವಿ ಆಶ್ರಯದಲ್ಲಿ ಸಮಗ್ರ ಬೇಸಾಯ ಮಾಡುತ್ತಿರುವ ಅಣ್ಣಯ್ಯ ರೈತರಿಗೆ ಕಡಿಮೆ ಖರ್ಚಿನ, ಭೂಮಿಯ ಫಲವತ್ತತೆ ಹಾಳಾಗದ, ಮಳೆ ನೀರು ಕೊಯ್ಲಿಗೂ ಸಹಕಾರಿಯಾಗುವ ಕೃಷಿ ಪದ್ಧತಿಯೊಂದರ ಬಗ್ಗೆ ಕಣ್ಣು ತೆರೆಸಿದ್ದಾರೆ.

ಇದೆಲ್ಲಾ ನಿಮಗೆ ಹೇಗೆ ಹೊಳೆಯಿತು ಎಂದು ಕೇಳಿದರೆ ಅವರು ಹೇಳುವುದು ಮುಂದಿನ ಪುಟಕ್ಕೆ...



ಹೀಗೆ "ಮಂಡ್ಯದಲ್ಲಿ ರೈತರು ಕಬ್ಬು, ಭತ್ತ ಬೆಳೆದು ಆರ್ಥಿಕ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದಾರೆ. ನಮ್ಮದು ಪೂರ್ತಿ ನೀರಾವರಿ ಪ್ರದೇಶವಾಗಿದ್ದರೂ ಕಾವೇರಿ ಅಚ್ಚುಕಟ್ಟು ಪ್ರದೇಶ ಕಳೆದ ಎರಡು ವರ್ಷಗಳಿಂದ ಮಳೆಯಾಗದೆ ಬರದಿಂದ ತತ್ತರಿಸಿ ಹೋಗಿತ್ತು. ರೈತರು ಬೆಳೆ ಬೆಳೆಯಲು ಮಾಡಿದ ಖರ್ಚು ಬರದೆ ಕೈ ಸುಟ್ಟುಕೊಂಡರು. ತೆಂಗಿನ ಮರವಿದ್ದವರು ಸ್ವಲ್ಪ ಚೇತರಿಸಿಕೊಂಡರು. ಅಡಿಕೆ ಒಣಗಿ ಹೋಯಿತು. ಹಾಗಾಗಿ ಸುಸ್ಥಿರ ಕೃಷಿಯ ಪ್ರಾತ್ಯಕ್ಷಿಕೆ ಮಾಡಿ ತೋರಿಸಬೇಕೆಂಬ ಕಾರಣಕ್ಕೆ ಇಂತಹ ಹೊಸ ಮಾದರಿಗಳನ್ನು ಮಾಡಿದ್ದೇವೆ. ಹೀಗೆ ಮತ್ತೊಂದು ಪ್ಲಾಟ್‌ನಲ್ಲಿ ಹುಲಿವಾನದ ಹತ್ತಿರ ಏಳು ಎಕರೆ ಹೆಬ್ಬೇವು ಮತ್ತು ನುಗ್ಗೆ ಹಾಕಿದ್ದೇವೆ" ಎಂದರು.

"ರೈತರಿಗೆ ಮರಗಿಡಗಳನ್ನು ಬೆಳೆಯಿರಿ ಎಂದರೆ ಅಯ್ಯೋ ಸ್ವಾಮಿ ಇಪ್ಪತ್ತು ವರ್ಷದವರೆಗೆ ಯಾರು ಕಾಯುತ್ತಾರೆ. ಅದು ನಮ್ಮಿಂದ ಆಗುವುದಿಲ್ಲ ಎನ್ನುತ್ತಾರೆ. ಹೀಗೆ ಬೆಳೆಯುವುದರಿಂದ ಮೂರು ನಾಲ್ಕು ತಿಂಗಳಲ್ಲಿ ಆದಾಯ ಬರುತ್ತದೆ. ಒಂದು ಬೆಳೆ ಕೈಕೊಟ್ಟರೆ ಮತ್ತೊಂದು ಬೆಳೆ ಗ್ಯಾರಂಟಿ. ಇಲ್ಲಿ ಪಶು ಸಂಗೋಪನೆಯನ್ನೂ ಮಾಡಬಹುದು. ಕುರಿದನ ಸಾಕಬಹುದು, ಅಗ್ರಿ, ಹಾರ್ಟಿ, ಸಿಲ್ವಿ ಅಂಡ್ ಅನಿಮಲ್ ಅಸ್‌ಬ್ಯಾಂಡರಿ ಮಾಡಬಹುದು. ಸಮಗ್ರ ಕೃಷಿ ಮಾಡುವುದರಿಂದ ಬರಗಾಲ ಮತ್ತು ಹವಾಮಾನ ಬದಲಾವಣೆಯಿಂದ ಆಗುವ ನಷ್ಟವನ್ನು ತಪ್ಪಿಸಿಕೊಳ್ಳಬಹುದು" ಎಂದು ಹೇಳುತ್ತಾರೆ.

ತೇಗ, ನುಗ್ಗೆ, ಹೆಬ್ಬೇವು ಗಿಡಗಳನ್ನು ಹಾಕುವ ಮೊದಲು ಚೆನ್ನಾಗಿ ಆರಂಭಮಾಡಿ ಕಬ್ಬಿನ ತೋಟಕ್ಕೆ ಒಡೆಯುವ ಕೂಪರ್ ಮೂಲಕ 30 ರಿಂದ 40 ಸೆಂಟಿ ಮೀಟರ್ ಆಳವಾಗಿ ಉಳುಮೆ ಮಾಡಿ ಗಿಡಗಳನ್ನು ಹಾಕಲಾಗಿದೆ. ಭೂಮಿಯ ಫಲವತ್ತತೆ ಕಾಪಾಡಿಕೊಳ್ಳಲು ಎರಡು ಸಾಲುಗಳ ನಡುವ ಹಸಿರು ಗೊಬ್ಬರವಾಗಿ ಡಯಂಚಾ, ಸೆಣಬು ಬಿತ್ತಿ ಹೂ ಬಿಟ್ಟ ನಂತರ ಭೂಮಿಗೆ ಸೇರಿಸುತ್ತಾರೆ.

ನಮಗೆ ತರಕಾರಿ, ಧಾನ್ಯವೂ ಬೇಕು, ಗೆಡ್ಡೆ ಗೆಣಸು, ಸೊಪ್ಪು ನಾರು ಬೇರು ಎಲ್ಲವೂ ಬೇಕು. ಅವೆಲ್ಲಾ ಸಹಜವಾಗಿ ಬೆಳೆದ ಪರಿಸರದ್ದಾಗಿರಬೇಕು. ಜೊತೆಗೆ ತೋಟದಲ್ಲಿ ಪಕ್ಷಿ, ಚಿಟ್ಟೆ, ಪತಂಗಗಳು ಇರಬೇಕು. ಒಟ್ಟಿನಲ್ಲಿ ಸುಸ್ಥಿರ ಸ್ವಾವಲಂಬಿ ಬದುಕು ಮತ್ತೆ ಮರಳಿ ನಮ್ಮ ಕೈಗೆಟುಕಬೇಕು ಎನ್ನುವ ರೈತರು ಇಂತಹ ಸುಲಭ ಮಾದರಿಯನ್ನು ಅನುಕರಣೆ ಮಾಡಬಹುದು. ಹೆಚ್ಚಿನ ಮಾಹಿತಿಗೆ ಎ.ಎಂ.ಅಣ್ಣಯ್ಯ ದೂರವಾಣಿ ಸಂಖ್ಯೆ 94480 19306 ಸಂಪರ್ಕಿಸಬಹುದು. ■

***

# ಕೃಷಿ ಅರಣ್ಯ ಮಾದರಿಗಳು

**ಡಾ. ವಿ.ಭಾಸ್ಕರ್**

ನಿವೃತ್ತ ಪ್ರಾಧ್ಯಾಪಕರು (ಕೃಷಿ ಅರಣ್ಯ ಶಾಸ್ತ್ರ) ಹಾಗೂ ಸಮನ್ವಯಾಧಿಕಾರಿ ರಾಷ್ಟ್ರೀಯ ಅರಣ್ಯೀಕರಣ ಮತ್ತು ಪರಿಸರ ಅಭಿವೃದ್ಧಿ ಮಂಡಳಿ (ಪ್ರಾಯೋಗಿಕ ಕೇಂದ್ರ) ಪರಿಸರ ಮತ್ತು ಅರಣ್ಯ ಕೇಂದ್ರ ಸಚಿವಾಲಯ, ಭಾರತ ಸರ್ಕಾರ, ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು

ಕೃಷಿಯಲ್ಲಿ ಮಣ್ಣಿಗಿರುವಷ್ಟು ಮಹತ್ವ ಮರಗಳಿಗೂ ಇದೆ. ಮರಗಳು ಕೃಷಿಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಮರಗಳು ವ್ಯವಸಾಯದಲ್ಲಿ ಸಾಕು ತಾಯಿ ಇದ್ದಂತೆ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಅನೇಕ ಅಭಿವೃದ್ಧಿ ಯೋಜನೆಗಳಿಂದ ಪ್ರಾಕೃತಿಕ ಕಾಡಿನ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಪರಿಸರ ಸಮತೋಲನ ಹಾಳಾಗುತ್ತಿದೆ. ಗ್ರಾಮಾಂತರ ಜನರಿಗೆ ದಿನನಿತ್ಯ ಬೇಕಾಗುವಂತಹ ಕೃಷಿಗೆ ಪೂರಕವಾಗುವಂತಹ, ಉರುವಲು ಕಟ್ಟಿಗೆ, ದನಕರುಗಳಿಗೆ ಮೇವು, ಗೊಬ್ಬರ ದೊರೆಯದಂತಾಗುತ್ತಿದೆ. ಮಳೆಯಲ್ಲೂ ವ್ಯತ್ಯಯವಾಗುತ್ತಿದೆ. ವಾತಾವರಣದ ತಾಪಮಾನ ಹೆಚ್ಚುತ್ತಿದೆ. ಬೇಸಾಯ ಮಾಡುವುದೇ ಕಷ್ಟಕರ ಉದ್ಯೋಗವಾಗುತ್ತದೆ. ಮಣ್ಣಿನ ಫಲವತ್ತತೆ, ಸಾವಯವ ಅಂಶವನ್ನು ಹೆಚ್ಚಿಸಲು, ಮಣ್ಣಿನ ಸವಕಳಿಯನ್ನು ತಪ್ಪಿಸಲು ಮತ್ತು ಮಳೆನೀರನ್ನು ಕೊಯ್ಲು ಮಾಡಲು ಮರಗಳು ಅತ್ಯಾವಶ್ಯಕ. ನೀರನ್ನು ಕಾಯಿಸಲು, ಅಡುಗೆ ಮಾಡಲು ಉರುವಲು, ಕೃಷಿ ಉಪಕರಣಗಳಿಗೆ ಬೇಕಾದ ಮರ, ದನಕರುಗಳಿಗೆ ಬೇಕಾದ ಮೇವು, ಬೆಳೆಗಳಿಗೆ ಸಾವಯವ ಗೊಬ್ಬರ ಇವೆಲ್ಲಕ್ಕೂ ಮರಗಳೇ ಮೂಲಾಧಾರ. ಬೇಸಾಯ ಪ್ರದೇಶಗಳಲ್ಲಿ ಬೆಳೆಸುವ ಮರಗಳಿಂದ ನಮ್ಮ ಆರೋಗ್ಯಕ್ಕೆ ಬೇಕಾಗುವ ಔಷಧಿಗಳು, ಹಣ್ಣು ಹಂಪಲುಗಳು ದೊರೆಯುವುದಲ್ಲದೆ ಅನೇಕ ಕೈಗಾರಿಕೆಗಳಿಗೆ ಬಳಸಬಹುದಾದ ಕಿರುಅರಣ್ಯ ಪದಾರ್ಥಗಳು ದೊರೆಯುತ್ತವೆ. ಕೃಷಿಯಲ್ಲಿ ಏಳುಬೀಳು ಇದ್ದಿದ್ದೇ. ಆದರೆ ರೈತರು ಕೃಷಿ–ಅರಣ್ಯ ಪದ್ಧತಿಯಲ್ಲಿ ಮರಗಳನ್ನು ಬೆಳೆಸಿದಲ್ಲಿ ಕೃಷಿಯಿಂದ ಆಗಬಹುದಾದ ನಷ್ಟದಿಂದ ಚೇತರಿಸಿಕೊಳ್ಳಲು ಅವಕಾಶವಿರುತ್ತದೆ. ಎಷ್ಟೋ ರೈತರು, ಕಷ್ಟಕಾಲದಲ್ಲಿ ಬೆಳೆಸಿದ ಮರಗಳನ್ನು ಮಾರಿ ಆರ್ಥಿಕವಾಗಿ ಸುಧಾರಿಸಿರುತ್ತಾರೆ. ಆದ್ದರಿಂದ ನಮ್ಮ ರೈತರು ತಮ್ಮ ಜಮೀನುಗಳಲ್ಲಿ ಮರಗಳನ್ನು ಮಾರಿ ಆರ್ಥಿಕವಾಗಿ ಸುಧಾರಿಸಿರುತ್ತಾರೆ. ಆದ್ದರಿಂದ ನಮ್ಮ ರೈತರು ತಮ್ಮ ಜಮೀನುಗಳಲ್ಲಿ ಮರಗಳನ್ನು ಬೆಳೆಸಿ ತಾವು ಪ್ರಯೋಜನ ಪಡೆದು ದೇಶದ ವೃಕ್ಷ ಸಂಪತ್ತನ್ನು ಹೆಚ್ಚಿಸಲು ನೆರವಾಗಬೇಕಿದೆ. ಈ ಸಂದರ್ಭದಲ್ಲಿ ರೈತರು ಯಾವ ಯಾವ ಮಾದರಿಯಲ್ಲಿ ಯಾವ ಯಾವ ಮರಗಳನ್ನು ಬೆಳೆಸಬಹುದು ಎಂದು ವಿಚಾರ ಮಾಡೋಣ.

**ಕೃಷಿ–ಅರಣ್ಯ ಮಾದರಿಗಳು**

ರೈತರು ಕೃಷಿ–ಅರಣ್ಯ ಪದ್ಧತಿ ನಿಯೋಜಿಸುವಾಗ ಯಾವ ಮಾದರಿ/ಮಾದರಿಗಳನ್ನು ಅನುಸರಿಸಬೇಕು ಎಂದು ನಿರ್ಧರಿಸುವ ಮುನ್ನ ಅದನ್ನು ನಿರ್ಧರಿಸುವ ಅನೇಕ ಅಂಶಗಳನ್ನು ತಿಳಿದಿರಬೇಕು.

**1. ರೈತನ ಉದ್ದೇಶವೇನು ಮತ್ತು ಆದ್ಯತೆ ಏನು?**

ಪ್ರತಿಯೊಬ್ಬ ರೈತನಿಗೂ ಆತನದೇ ಆದ ಉದ್ದೇಶ ಮತ್ತು ಆದ್ಯತೆ ಇರುತ್ತದೆ. ಅವುಗಳಲ್ಲಿ ಇವಾವುದಾದರೂ ಇರಬಹುದು. ವಾಣಿಜ್ಯ ಬೆಳೆಯಾಗಿ, ಸಾವಯವ ಕೃಷಿಗೆ ಪೂರಕವಾದಂತಹ, ಸಮಗ್ರ ಕೃಷಿಗೆ ಪೂರಕವಾದಂತಹ, ಅತ್ಯಂತ ಹೆಚ್ಚು ಆದಾಯ ತರುವಂತಹ, ಮಳೆ ನೀರು ಸಂರಕ್ಷಣೆ ಮಾಡುವುದು, ಮಣ್ಣಿನ ಸವಕಳಿ ತಪ್ಪಿಸುವುದು, ಪಾಳು ಜಮೀನನ್ನು ಅಭಿವೃದ್ಧಿಪಡಿಸುವುದು, ಸ್ಥಳೀಯ ಮಾರುಕಟ್ಟೆಯಲ್ಲಿನ ಬೇಡಿಕೆ ಮತ್ತು ಸಿಗಬಹುದಾದಂತಹ ಮಾರುಕಟ್ಟೆ ಬೆಲೆ, ಕೈಗಾರಿಕೆಗಳಿಗೆ ಬೇಕಾಗಿರುವಂತಹ ಅರಣ್ಯ ಉತ್ಪನ್ನಗಳಿಗಿರುವ ಬೇಡಿಕೆ, ಸಸಿಗಳು ದೊರೆಯುವಿಕೆ, ಕಟಾವಿನ ಅವದಿ ಇತ್ಯಾದಿ.

**2. ಪ್ರಾದೇಶಿಕ ಹವಾಮಾನ ಮತ್ತು ಸ್ಥಳೀಯ ಗುಣಲಕ್ಷಣಗಳು**

ಇವುಗಳಲ್ಲಿ ಕೃಷಿ–ಅರಣ್ಯ ಮಾದರಿಯನ್ನು ನಿರ್ಧರಿಸಬಹುದಾದ ಅಂಶಗಳೆಂದರೆ, ಅಲ್ಲಿನ ಮಣ್ಣಿನ ಆಳ ಮತ್ತು ಗುಣಲಕ್ಷಣ, ಮಳೆಯ ಪ್ರಮಾಣ, ನೀರಾವರಿ ಸೌಲಭ್ಯ, ಕೂಲಿ ಕಾರ್ಮಿಕರು ದೊರೆಯುವಿಕೆ, ಜಮೀನಿನ ವಿಸ್ತೀರ್ಣ ಇತ್ಯಾದಿ.

**3. ಕೃಷಿ ಅರಣ್ಯ ಮಾದರಿಗಳಲ್ಲಿ ಗಮನಿಸಬೇಕಾದ ಇತರೆ ಅಂಶಗಳು**

- ಅ. ಕೃಷಿ ಬೆಳೆಗಳೊಂದಿಗೆ ಪೈಪೋಟಿಗೆ ಇಳಿಯದೆ ಹೊಂದಿಕೊಂಡು ಬೆಳೆಯುವಂತಹ ಮರಗಳನ್ನು ಆರಿಸುವುದು.
- ಆ. ಅದೇ ರೀತಿ ಮರಗಳೊಂದಿಗೆ ಪೈಪೋಟಿಗೆ ಇಳಿಯದಂತಹ ಕೃಷಿ ಬೆಳೆಗಳನ್ನು ಆರಿಸುವುದು.
- ಇ. ಮರಗಳ ಸಾಲುಗಳು. ಯಾವ ದಿಕ್ಕಿಗೆ ಚಾಚಿರಬೇಕೆಂಬುದು
- ಈ. ಮರಗಳನ್ನು ಬೆಳೆಸುವ ಕ್ರಮಗಳು ಮತ್ತು ನಿರ್ವಹಣೆ,
  - (i) ಮರಗಳ ನಡುವಿನ ಅಂತರ ಮತ್ತು ಸಾಲುಗಳ ನಡುವಿನ ಅಂತರ
  - (i) ಸಸಿ ನೆಡುವ ವಿಧಾನಗಳು (ಗುಂಡಿ, ಕಂದಕ, ಬೀಜ ಊರುವಿಕೆ, ನೇರವಾಗಿ ಕೊಂಬೆ ನೆಡುವಿಕೆ ಇತ್ಯಾದಿ).
  - (iii) ಕೊಂಬೆ ರೆಂಬೆ ಸವರುವಿಕೆ, ಗಿಡಗಳ ವಿರಳತೆ, ನೀರಾವರಿ ಗೊಬ್ಬರದ ಪ್ರಮಾಣ ಇತ್ಯಾದಿ.

ಮುಂದಿನ ಪುಟಕ್ಕೆ...

**4. ಕೃಷಿ–ಅರಣ್ಯ ಮಾದರಿಗಳು**

**ಎ) ತೋಪುವನ ವಿಧಾನ:** ಈ ಮಾದರಿಯಲ್ಲಿ ಜಮೀನಿನ ವಿಸ್ತೀರ್ಣದ ಒಂದು ಭಾಗದಲ್ಲಿ ಪ್ರತ್ಯೇಕವಾಗಿ ಮರಗಳನ್ನು ಮತ್ತು ಕೃಷಿ ಬೆಳೆಗಳನ್ನು ಪ್ರತ್ಯೇಕವಾಗಿ ಬೆಳೆಸಲಾಗುವುದು. ಮರಗಳನ್ನು ದಟ್ಟವನದ ರೀತಿ ಬೆಳೆಸಲಾಗುವುದು. ಈ ಮಾದರಿಯಲ್ಲಿ ಮರಗಳೆಲ್ಲವೂ ಒಂದೇ ಕಡೆ ಇರುವುದರಿಂದ ನಿರ್ವಹಣೆ ಸುಲಭ. ಆದರೆ ಕಾಲಕ್ರಮವಾಗಿ ಮರಗಳನ್ನು ವಿರಳತೆ ಮಾಡಬೇಕಾಗುತ್ತದೆ. ಇಲ್ಲದಿದ್ದಲ್ಲಿ ಮರಗಳ ನಡುವೆಯೇ ಪೈಪೋಟಿ ಹೆಚ್ಚಿ ಮರಗಳು ಕಂಬಗಳ ರೀತಿ ತೆಳ್ಳನೆ ಗಾತ್ರ ಬೆಳೆಯುತ್ತವೆ. ಈ ರೀತಿಯಲ್ಲಿ ಬೆಳೆದ ಮರಗಳಿಗೆ (ಉದಾ: ನೀಲಗಿರಿ, ಅಕೇಷಿಯಾ, ಸುಬಾಬುಲ್, ಸರ್ವೆ) ಕಾಗದ ಕಾರ್ಖಾನೆಗಳಿಗೆ ಮತ್ತು ಊರುಕಂಬಗಳಿಗೆ ಹೆಚ್ಚಿಗೆ ಬೇಡಿಕೆಯಿರುತ್ತದೆ. ಈ ಮಾದರಿಯಲ್ಲಿ ಬೆಳೆದ ಮರಗಳನ್ನು ಅಲ್ಪಾವಧಿಯಲ್ಲಿ, ಕಟಾವು ಮಾಡಬಹುದು, ಕಟಾವಿನ ನಂತರ, ಹರಿಸಿದ ಬುಡಗಳಿಂದ ಕೂಳೆಗಳು ಬರುವಂತೆ, ನೀರು ಗೊಬ್ಬರ ಕೊಟ್ಟು ಉತ್ತೇಜಿಸಬಹುದು. ಹೀಗೆ ಮರು ಬೆಳೆದ ಕೂಳೆ ಬೆಳೆಗಳು ಹೆಚ್ಚು ಶೀಘ್ರವಾಗಿ ಬೆಳೆಯುವುದರಿಂದ ಇನ್ನೂ ಅಲ್ಪಾವಧಿಯಲ್ಲಿ ಕಟಾವು ಮಾಡಬಹುದು. ಕೂಳೆ ಬರದಂತಹ ಮರಗಳಾದರೆ ಕಟಾವಿನ ನಂತರ ಸಸಿಗಳ ಮರು ನಾಟಿ ಮಾಡಿ ತೋಪನ್ನು ಬೆಳೆಸಬಹುದು. ಈ ಮಾದರಿಯನ್ನು ಕೆಲವು ರೈತರು, ಅಂದರೆ ಕೃಷಿ ಮಾಡಲು ಅನಾನುಕೂಲ ಇರುವಂತಹವರು, ಜಮೀನಿನ ಸಂಪೂರ್ಣ ವಿಸ್ತೀರ್ಣದಲ್ಲೂ ಬೆಳೆಸುತ್ತಾರೆ.

ತೋಪು ವಿಧಾನದಲ್ಲಿ ಮರಗಳನ್ನು ಏಕಬೆಳೆಯಾಗಿ ಇಲ್ಲವೇ ಮಿಶ್ರಬೆಳೆಯಾಗಿ ಬೆಳೆಸಬಹುದು. ಏಕಬೆಳೆಯಾಗಿ ತೋಪುವನ ಬೆಳೆಸಿದಾಗ ನಿರ್ವಹಣೆ ಸುಲಭ. ಮಿಶ್ರವನ ಬೆಳೆಸುವಾಗ ತಾಂತ್ರಿಕತೆ ಚೆನ್ನಾಗಿ ಗೊತ್ತಿರಬೇಕು.

**ಬಿ) ಸಾಲುಮರ ವಿಧಾನ (RowPlanting)**

ಈ ವಿಧಾನದಲ್ಲಿ ಮರಗಳ ಸಾಲನ್ನು 20–40 ಅಡಿಗಳ ಅಂತರದಲ್ಲಿ ಬೆಳೆದು, ಪ್ರತಿಸಾಲಿನಲ್ಲಿ ಮರದಿಂದ ಮರಕ್ಕೆ 5 ಅಡಿಯಿಂದ 10 ಅಡಿಗಳ ಅಂತರ ಕೊಡಬೇಕಾಗುತ್ತದೆ. ಸಾಲುಗಳ ನಡುವೆ ಅಂತರ ಬೆಳೆಯಾಗಿ ಕೃಷಿ ಬೆಳೆಗಳನ್ನು ಬೆಳೆಸುವುದು. ಈ ವಿಧಾನದಲ್ಲಿ ಸಾಮಾನ್ಯವಾಗಿ 3–4 ವರ್ಷಗಳ ನಂತರ ಮರಗಳ ನೆರಳಿನಿಂದ ಇಲ್ಲವೇ ಅಡ್ಡ ಬೇರುಗಳಿಂದಾಗುವ ನೀರಿಗೆ ಮತ್ತು ಪೋಷಕಾಂಶಗಳಿಗಾಗುವ ಪೋಟಿಯಿಂದಾಗಿ ಮರಗಳ ಇಕ್ಕೆಲಗಳಲ್ಲಿ ಕೃಷಿ ಬೆಳೆಗಳಿಗೆ ಧಕ್ಕೆಯಾಗುವ ಸಾಧ್ಯತೆ ಇರುತ್ತದೆ. ಆರೆ ನೀರಾವರಿ ಅಥವಾ ಪೂರ್ತಿ ನೀರಾವರಿ ಪದ್ಧತಿಯಲ್ಲಿ ಬೆಳೆದಾಗ ಕೃಷಿ ಬೆಳೆಗಳಿಗೆ ಧಕ್ಕೆ ಉಂಟಾಗುವುದು ಕಡಿಮೆಯಾಗುತ್ತದೆ. ಈ ಕ್ರಮದಲ್ಲಿ ಸೂಕ್ತ ಮರಗಳನ್ನು ಮತ್ತು ಕೃಷಿ ಬೆಳೆಗಳನ್ನು ಆರಿಸುವುದು ಮುಖ್ಯವಾಗುತ್ತಿದೆ. ಸಾಮಾನ್ಯವಾಗಿ, ದಪ್ಪ ಗಾತ್ರದ ನಾಟಾ ಮರಗಳನ್ನು ಬೆಳೆಸಬೇಕೆಂಬ ಉದ್ದೇಶವಿದ್ದರೆ ಸಾಲುಮರ ವಿಧಾನ ಅನುಸರಿಸುವುದು ಉತ್ತಮ.

**ಸಿ) ಪಟ್ಟಿ ಸಾಲು ವಿಧಾನ (Strip Planting)**

ಈ ಮಾದರಿಯಲ್ಲಿ ಪ್ರತಿ ಪಟ್ಟಿ ಸಾಲಿನಲ್ಲೂ 5 ರಿಂದ 10 ಸಾಲಿನಲ್ಲಿ ಮರಗಳಿರುತ್ತವೆ. ಪಟ್ಟಿಯಿಂದ ಪಟ್ಟಿಗೆ 20 ರಿಂದ 40 ಅಡಿ ಅಂತರಕೊಟ್ಟು ಅಂತರ ಬೆಳೆಯಾಗಿ ಕೃಷಿ ಬೆಳೆ ಬೆಳೆಯಬಹುದು. ಈ ಮಾದರಿಯಲ್ಲಿ ಸಾಮಾನ್ಯವಾಗಿ ಸರ್ವೆ, ಸುಬಾಬುಲ್, ಅಗಸೆ ಮುಂತಾದ ಮರಗಳನ್ನು ಬೆಳೆಸಬಹುದು. ಜಮೀನಿನ ವಿಸ್ತೀರ್ಣ 10 ಎಕರೆಗೂ ಮೇಲ್ಪಟ್ಟಿದ್ದರೆ ಈ ಮಾದರಿ ಸೂಕ್ತ.

**ಡಿ) ಅಲೆ ವಿಧಾನ (Alley Cropping)**

ಇದು ಸಾಲುಮರ ವಿಧಾನದ ರೀತಿಯೇ ಆದರೆ ಒಂದೇ ವ್ಯತ್ಯಾಸವೆಂದರೆ ಅಲೆ ವಿಧಾನದಲ್ಲಿ ಸಾಲಿನಲ್ಲಿ ಬೆಳೆದ ಮರಗಳನ್ನು ಕ್ರಮಬದ್ಧವಾಗಿ ಪ್ರತಿ ವರ್ಷಕ್ಕೊಮ್ಮೆಯಾದರೂ ಮೇವಿಗಾಗಿ ಇಲ್ಲವೇ ಸೊಪ್ಪಿನ ಗೊಬ್ಬರಕ್ಕೆ ಬುಡದ ತನಕ ಕಟಾವು ಮಾಡಲಾಗುತ್ತದೆ. ಮರಗಳಾಗಿ ಎತ್ತರಕ್ಕೆ ಬೆಳೆಯಲು ಬಿಡುವುದಿಲ್ಲ. ಈ ಮಾದರಿಗೆ ಗೊಬ್ಬರದ ಗಿಡ, ಸುಬಾಬುಲ್ ಗಿಡಗಳು ಸೂಕ್ತ.

**ಇ) ಗುಂಪು ನಡುವಿಧಾನ (Cluster Planting)**

ಈ ವಿಧಾನದಲ್ಲಿ ಜಮೀನಿನ ಅಲ್ಲಲ್ಲಿ ಗುಂಪು ಗುಂಪಾಗಿ ಮರಗಳನ್ನು ಬೆಳೆಸಲಾಗುತ್ತದೆ. ಕ್ರಮಬದ್ಧವಾದ ಯಾವುದೇ ಸಾಲುಗಳಿರುವುದಿಲ್ಲ. ಇದರಿಂದ ವಿಶೇಷವಾದ ಅನುಕೂಲಗಳು ಏನು ಇಲ್ಲ. ಆದರೆ ರೈತರ ಆಯ್ಕೆಗೆ ಬಿಟ್ಟದ್ದು (ಉದಾ: ಬೊಂಬು)

**ಎಫ್) ಯಾದೃಚ್ಛಿಕ ನೆಡುವಿಧಾನ (Random Planting)**

ಇದು ಕೂಡ ಗುಂಪು ನೆಡುವಿಧಾನದ ರೀತಿಯದ್ದೇ. ಆದರೆ, ಜಮೀನಿನ ಅಲ್ಲಲ್ಲಿ ಒಂದೊಂದೇ ಮರಗಳನ್ನು ಯಾವುದೇ ಕ್ರಮಬದ್ಧವಾದ ಸಾಲುಗಳಿಲ್ಲದೇ ಬೆಳೆಸುವ ವಿಧಾನ. ಈ ವಿಧಾನವನ್ನು ಸಾಮಾನ್ಯವಾಗಿ ಹಳೆಯ ಸಾಂಪ್ರದಾಯಿಕ ಕೃಷಿ–ಅರಣ್ಯ ಪದ್ಧತಿಯಲ್ಲಿ ರೈತರು ಬೆಳೆಯುವುದನ್ನು ನೋಡಿದ್ದೇವೆ. ಈಗಲೂ ಮಂಡ್ಯ ಜಿಲ್ಲೆಯ ನಾಗಮಂಗಲ, ಮಳವಳ್ಳಿ ಮುಂತಾದ ಕಡೆ ಪ್ರಚಲಿತದಲ್ಲಿದೆ. ಹುಣಸೆ, ಆಲ, ಬನ್ನಿ, ಹಲಸು, ಜಾಲಿ ಮುಂತಾದ ಮರಗಳು ಈ ಮಾದರಿಗೆ ಸೂಕ್ತ.

**ಜಿ) ಬದುವನ ಮಾದರಿ (Bund Planting)**

ಎಲ್ಲಾ ಜಮೀನುಗಳಲ್ಲೂ ಬದುಗಳು ಇದ್ದೇಇರುತ್ತವೆ. ಇವುಗಳು ಮಣ್ಣಿನ ಸವಕಳಿ ತಪ್ಪಿಸಲು ಮತ್ತು ಮಳೆನೀರಿನ ಸಂರಕ್ಷಣೆ ಮಾಡಲು ಭೂ ಮೇಲ್ಮೆಗೆ ತಕ್ಕಂತೆ ನಿರ್ಮಿಸಲಾಗಿರುತ್ತದೆ. ಇಂತಹ ಬದುಗಳ ಮೇಲೆ ಬದುಗಳ ಅಡ್ಡ ವಿಸ್ತೀರ್ಣಕ್ಕೆ ತಕ್ಕಂತೆ, ಒಂದರಿಂದ ಎರಡು ನಾಲ್ಕು ಸಾಲುಗಳಲ್ಲಿ ಮರಗಳನ್ನು ಬೆಳೆಸಬಹುದು. ಕರ್ನಾಟಕ ರಾಜ್ಯವೊಂದರಲ್ಲೇ ರೈತರು ಜಮೀನಿನ ಬದುಗಳ ಮೇಲೆ ಮರಗಳನ್ನು ಬೆಳೆಸಿದ್ದೇ ಆದಲ್ಲಿ ಏನಿಲ್ಲವೆಂದರೂ ಸುಮಾರು 5 ಲಕ್ಷ ಹೆಕ್ಟೇರ್‌ನಷ್ಟು ಅರಣ್ಯ ವಿಸ್ತರಿಸಬಹುದು. ನೀರಾವರಿ ಜಮೀನುಗಳಲ್ಲಿ ನೀರು ಕಾಲುವೆ ದಡಗಳ ಮೇಲೆ ದಿಮ್ಮಿ ನಾಟಾಗೆ ಬೇಕಾಗುವಂತಹ ಮರಗಳನ್ನು ಬೆಳೆಸಿಕೊಂಡಲ್ಲಿ ಮರಗಳು ಶೀಘ್ರವಾಗಿ ಮತ್ತು ದಪ್ಪನಾಗಿ ಬೆಳೆಯುತ್ತವೆ.ನೀರಾವರಿ ಪ್ರದೇಶವಾದ ಮಂಡ್ಯ ಜಿಲ್ಲೆಯಲ್ಲಿ ಬದುವನ ಮಾದರಿಯನ್ನು ಹೆಚ್ಚಾಗಿ ಕಾಣಬಹುದು 40ಕ್ಕೂ ಹೆಚ್ಚು ಮರತಳಿಗಳನ್ನು ರೈತರು ಅಲ್ಲಿ ಬೆಳೆಸಿ, ಮೇವಿಗೆ, ಹಸಿರು ಗೊಬ್ಬರಕ್ಕೆ, ವ್ಯವಸಾಯ ಸಲಕರಣೆಗಳಿಗೆ, ಬೊಂಬುಗಳಿಗೆ, ದಿಮ್ಮಿಗೆ ಹೀಗೆ ಅನೇಕ ಉಪಯೋಗಕ್ಕೆ ಬರುವಂತಹ ಬಹು ಉಪಯೋಗಿ ಮರಗಳನ್ನು ಬೆಳೆಸಲಾಗಿದೆ.

**ಹೆಚ್) ಬೇಲಿಕಾಡು ವಿಧಾನ (Hedge Planting)**

ಕೃಷಿಭೂಮಿಯಲ್ಲಿ ಬೆಳೆದ ಯಾವುದೇ ಬೆಳೆಗೆ ರಕ್ಷಣೆ ಅತ್ಯಗತ್ಯ. ಒಳನುಗ್ಗಿ ಬೆಳೆಗಳನ್ನು ತಿಂದು ಹಾಕುವ ಹೊರಗಡೆ ದನಕರುಗಳನ್ನು ದೂರವಿಡಲು ಬೇಲಿ ಬೇಕಾಗುತ್ತದೆ. ತಂತಿ, ಮುಳ್ಳಿನ ಬೇಲಿ ದುಬಾರಿ, ಮುಳ್ಳಿನ ಕತ್ತಾಳೆ ಗಿಡಗಳನ್ನು ನೆಡುವುದು ಸರ್ವೇಸಾಮಾನ್ಯ. ಬೇಲಿ ಕಾಡು ವಿಧಾನದಲ್ಲಿ ಜಮೀನಿನ ಅಂಚಿನಿಂದ ಒಂದು ಮೀಟರ್ ಅಂತರ ಮುಂದಿನ ಪುಟಕ್ಕೆ...



ಬಿಟ್ಟು ಒಳಭಾಗದಲ್ಲಿ ಉದ್ದಕ್ಕೂ $1^{1/2}$ ಅಡಿ ಅಗಲ, $1^{1/2}$ ಅಡಿ ಆಳದ ಕಂದಕಗಳನ್ನು ತೋಡಿ ತೆಗೆದ ಮಣ್ಣನ್ನು ಕಂದಕದ ಹೊರಭಾಗಕ್ಕೆ ಉದ್ದಕ್ಕೂ ದಿಣ್ಣೆ ಮಾಡುವುದು. ಕಂದಕದ ಮಧ್ಯದಲ್ಲಿ 1 ಸಿಲ್ವರ್ ಓಕ್ ಅಥವಾ ತೇಗ. ಕೊನೆಭಾಗದಲ್ಲಿ ಸರ್ವೆ ನೆಡಬೇಕು. ದಿಣ್ಣೆಯ ಹೊರ ಅಂಚಿನ ಮೇಲೆ ಕತ್ತಾಳೆ ಗಿಡಗಳನ್ನು ಹಚ್ಚಿ, ಮಧ್ಯಭಾಗಕ್ಕೆ ಉದ್ದಕ್ಕೂ ದೋಣಿ ಅಥವಾ ಗೆರೆ ತೆಗೆದು ಅದರಲ್ಲಿ ನೀಲಗಿರಿ ಸಿಟ್ರಿಯೋಡೋರ, ಗೊಬ್ಬರದ ಗಿಡ, ಬನ್ನಿ, ಜಾಲಿ, ಸೀಮೆ ಹುಣಿಸೆ, ಬೇವು, ಸೀಮೆ ತಂಗಡಿ, ಹೊಂಗೆ ಇತ್ಯಾದಿ ಮರಗಳ ಬೀಜಗಳನ್ನು ಊರಿ ಮಣ್ಣು ಮುಚ್ಚಿದರೆ ಮಳೆಗಾಲದಲ್ಲಿ ಜಮೀನಿನ ಸುತ್ತಲೂ ಒಂದು ಹಸಿರುಗೋಡೆ ಬೆಳೆದು ನಿಲ್ಲುತ್ತದೆ. ಇವಾವುದನ್ನು ದನಗಳು ತಿನ್ನಲಾರವು ಮತ್ತು ಈ ಗಿಡಗಳಿಂದ ವಿವಿಧ ಪ್ರಯೋಜನ ಗಳುಂಟು.

**ಐ) ಏಕಸಾಲಿನ ಮತ್ತು ಬಹುಸಾಲಿನ ಗಾಳಿ ತಡೆ ಮಾದರಿಗಳು**

ವೇಗವಾಗಿ ಬೀಸುವ ಗಾಳಿಯಿಂದ ಮೇಲ್ಮಣ್ಣು ತೂರಿಹೋಗದಂತೆ ತಡೆಯಲು ಮತ್ತು ಗಾಳಿಯ ಹೊಡೆತಕ್ಕೆ ಸಿಕ್ಕಿ ಕೃಷಿ ಬೆಳೆಗಳು ಬುಡಮೇಲಾಗದಂತೆ ತಡೆಯಲು, ಮಣ್ಣಿನಿಂದ ನೀರಿನಾಂಶದ ಕೊರತೆ ಬರದ ಹಾಗೆ ರಕ್ಷಿಸಲು ಜಮೀನಿನ ಅಂಚಿನ ಉದ್ದಕ್ಕೂ ಅದರಲ್ಲೂ ಗಾಳಿ ಬೀಸುವ ದಿಕ್ಕಿಗೆ ವಿರುದ್ಧವಾಗಿ ಏಕಸಾಲಿನ ಅಥವಾ ಬಹುಸಾಲಿನ ಗಾಳಿತಡೆಗಳನ್ನು ಬೆಳೆಸಬಹುದು. ಗಾಳಿಯ ರಭಸ ಜಾಸ್ತಿ ಇದ್ದಷ್ಟೂ ಬಹುಸಾಲಿನ ಗಾಳಿತಡೆ ಸೂಕ್ತ. ಈ ಮಾದರಿಗೆ ಆರಿಸುವ ಮರಗಳು ನಿತ್ಯ ಹರಿದ್ವರ್ಣದವಾಗಿರಬೇಕು. ಆಳವಾಗಿ ಬೇರು ಇರುವಂತಹ ನೇರವಾಗಿ ಎತ್ತರಕ್ಕೆ ಬೆಳೆಯುವ ಗಾಳಿಯ ಹೊಡೆತ ನಿಗ್ರಹ ಶಕ್ತಿಯುಳ್ಳಂತಹವಾಗಿರಬೇಕು. ಉದಾ: ಸಿಲ್ವರ್ ಓಕ್, ಸರ್ವೆ, ತೇಗ ಮುಂತಾದವು.

**ಜೆ) ಕೃಷಿ–ಅರಣ್ಯ(ವನ)–ಹುಲ್ಲುಗಾವಲು–ತೋಟಗಾರಿಕೆ ಸಂಯುಕ್ತ ಮಾದರಿ**

ಈ ಮಾದರಿಯಲ್ಲಿ ರೈತರು, ಕೃಷಿ–ವನ, ವನ–ಹುಲ್ಲುಗಾವಲು, ವನ ತೋಟದ ಬೆಳೆ, ಕೃಷಿ–ವನ–ತೋಟಗಾರಿಕೆ, ಇಲ್ಲವೇ ಎಲ್ಲಾ ಕ್ರಮಗಳನ್ನು ಒಂದೇ ಜಮೀನಿನಲ್ಲಿ ಒಂದುಗೂಡಿಸಿ ಪರಿಪಾಲನೆ ಮಾಡುವುದರಿಂದ ಕೃಷಿ ಬೆಳೆಗಳಿಂದ ಧಾನ್ಯಗಳು, ತೋಟಗಾರಿಕೆ ಬೆಳೆಯಿಂದ ತರಕಾರಿ ಹಣ್ಣುಗಳು, ಹುಲ್ಲುಗಾವಲಿನಿಂದ ದನಕರುಗಳಿಗೆ ಮೇವು ದೊರೆಯುತ್ತದೆ. ಇದನ್ನು ಸಮಗ್ರ ಮಾದರಿ ಎಂದೇ ಹೇಳಬಹುದು.

**ಕೆ) ಬಹುಅಂತಸ್ತಿನ ಕೃಷಿ ಅರಣ್ಯ**

ಈ ಮಾದರಿಯನ್ನು ಸಾಮಾನ್ಯವಾಗಿ ಮಲೆನಾಡು ಈ ಪ್ರದೇಶದಲ್ಲಿ ರೈತರು ಪಾಲಿಸುವುದನ್ನು ನೋಡಬಹುದು. ಏಲಕ್ಕಿ, ಕಾಫಿ, ಟೀ ತೋಟಗಳಲ್ಲಿ ನೆರಳಿಗೆ ಅನೇಕ ಜಾತಿಯ ಮರಗಳನ್ನು ಬೆಳೆಸಿ, ಅವುಗಳಡಿ ಈ ವಾಣಿಜ್ಯ ಮತ್ತು ಸಾಂಬಾರು ಬೆಳೆಗಳನ್ನು ಕಿತ್ತಳೆ, ಅನಾನಸು, ಅಗರ್‌ಮರ, ಕೊಕೊ ಮುಂತಾದವುಗಳನ್ನು ಬೆಳೆಸಲಾಗುತ್ತದೆ. ಜೊತೆಗೆ, ಈ ಮರಗಳಿಗೆ ಅಂಟಿಕೊಂಡು ಬೆಳೆಯುವ ಕಾಡುಮೆಣಸು ಕೂಡ ಕಂಡುಬರುತ್ತದೆ. ಬಯಲುಸೀಮೆಯಲ್ಲೂ ನೀರಿನ ವಸತಿ ಇರುವೆಡೆ ಆಗಸೆ, ಹಾಲಿವಾಣ ಮರಗಳನ್ನು ಬೆಳೆಸಿ ಅವಕ್ಕೆ ವೀಳ್ಯದೆಲೆ ಬೆಳೆಯನ್ನು ಅಂಟಿಸುತ್ತಾರೆ. ಈ ಮರಗಳಡಿ ಕೆಲವು ಹೂವಿನ ಬೆಳೆ, ರೇಷ್ಮೆ ಗಿಡ ಕೆಲವು ತರಕಾರಿ ಬೆಳೆಗಳನ್ನು ಬೆಳೆಸಲಾಗುತ್ತದೆ.

**ಎಲ್) ಹಾಳು ಕೃಷಿ ಜಮಿನಿನ ಸುಧಾರಣಾ ಮಾದರಿ (Land reclamation model through Agro forestry)**

ಅನೇಕ ರೈತರ ಜಮೀನಿನಲ್ಲಿ ಕೃಷಿ ಮಾಡಲು ಯೋಗ್ಯವೆನಿಸಿದ ಪಾಳುಬಿಟ್ಟ ದಿಣ್ಣೆ ಪ್ರದೇಶ, ಊಳು ಬಿದ್ದಿದ ಪ್ರದೇಶ, ಚೌಗುಪ್ರದೇಶ, ಚೌಳುಭೂಮಿ ಪ್ರದೇಶಗಳಿರುತ್ತವೆ. ಇಂತಹ ಪ್ರದೇಶಗಳಲ್ಲಿ ಸೂಕ್ತವಾದ ತಂತ್ರಜ್ಞಾನ ಅಳವಡಿಸಿ, ಸೂಕ್ತ ಮರಗಿಡಗಳನ್ನು ಬೆಳೆಸಿದಾಗ ಕಾಲಕ್ರಮೇಣ ಜಮೀನು ಕೃಷಿಗೆ ಯೋಗ್ಯವಾಗುವಂತೆ ಪರಿವರ್ತನೆಗೊಳಿಸಬಹುದು.

**5. ಸುಸ್ಥಿರ ಕೃಷಿ–ಅರಣ್ಯ ಮಾದರಿ (Sustainable Agro forestry Model)**

ಸುಸ್ಥಿರ ಕೃಷಿಗೆ ಕೃಷಿ–ಅರಣ್ಯ ಮಾದರಿಯೇ ಸಾಧನ. ಅದನ್ನು ಸಾಧಿಸಬೇಕಾದರೆ ಈ ಕೆಳಗೆ ನಮೂದಿಸಿರುವ ಅಂಶಗಳು ಮುಖ್ಯ.

(ಅ) ಮೇವಿನ ಮರಗಳು, ಮೇವಿನ ಬೆಳೆಗಳು ಮತ್ತು ಪಶುಸಂಗೋಪನೆ ಈ ಮಾದರಿ ಅನುಸರಿಸಿದರೆ ಪಶುಸಂಗೋಪನೆಗೆ ಆಧಾರವಾಗಿ ಕೃಷಿ ಬೆಳೆಗಳಿಗೆ ಬೇಕಾಗುವ ಗೊಬ್ಬರ ಸಿಗುತ್ತಿದೆ. ಅಡುಗೆ ಮಾಡಲು ಬಯೋಗ್ಯಾಸ್ ಸಿಗುತ್ತದೆ. ಮನೆಗೆ ಮಾರಾಟಕ್ಕೆ ಹಾಲು ದೊರೆಯುತ್ತದೆ.

ಆ) ಹಸಿರು ಗೊಬ್ಬರದ ಮರಗಿಡಗಳು ಸಾವಯವ ಕೃಷಿಗೆ ನಾಂದಿ

ಇ) ವ್ಯವಸಾಯ ಸಲಕರಣೆಗಳಿಗೆ ಬರುವಂತಹ ಸೂಕ್ತ ಮುಂದಿನ ಪುಟಕ್ಕೆ...



ಮರಗಳ ಬೇಸಾಯ

ಈ) ಮನೆಕಟ್ಟಲು ಬರುವಂತಹ ನಾಟಾ/ದಿಮ್ಮಿ ಮರಗಳನ್ನು ಬೆಳೆಸುವುದು.

ಉ) ನೀರು ಕಾಯಿಸಲು, ಅಡುಗೆ ಮಾಡಲು ಬೇಕಾಗುವ ಉರುವಲು/ಸೌದೆಗೆ ಸೂಕ್ತವಾದ ಮರಗಳನ್ನು ಬೆಳೆಸುವುದು.

ಊ) ಕೃಷಿ ಉಪಕರಣಗಳಾದ ಟ್ರಾಕ್ಟರ್, ಪವರ್ ಟಿಲ್ಲರ್, ನೀರೆತ್ತಲು ಬೇಕಾದ ವಿದ್ಯುತ್ ಜನರೇಟರ್‌ಗೆ ಬೇಕಾಗುವ ಜೇಪಂ–ಇಂಧನ ಗಿಡ, ಮರಗಳಾದ ಜಟ್ರೋಪ ಹೊಂಗೆ ಮರಗಳನ್ನು ಬೆಳೆಸುವುದು.

ಋ) ಕೃಷಿ ಬೆಳೆಗಳಿಗೆ ಹಾನಿ ಮಾಡುವ ಕೀಟ ಮತ್ತು ಶಿಲೀಂಧ್ರಿಯಗಳನ್ನು ಹತೋಟಿ ಮಾಡುವ ಬೇವಿನ ಮರದಂತಹ ಜೈವಿಕ ಕೀಟನಾಶಕಕಾರಕ ಗಿಡಮರಗಳನ್ನು ಬೆಳೆಸುವುದು.

ಋ) ಜೇನುನೊಣಗಳನ್ನು ಆಕರ್ಷಿಸುವಂತಹ ಗಿಡಮರಗಳನ್ನು ಬೆಳೆಸುವುದರಿಂದ ಕೃಷಿ ಬೆಳೆಗಳಿಗೆ ಪರಾಗಸ್ಪರ್ಶ ಮಾಡಿ ಇಳುವರಿ ಹೆಚ್ಚಿಸಲು ನೆರವಾಗುವುದಲ್ಲದೆ ಜೇನು ತುಪ್ಪವೂ ದೊರೆಯುತ್ತದೆ.

ಆದ್ದರಿಂದ ರೈತರು ಗಳಿಸುವ ಹಣದ ಲಾಭವೊಂದನ್ನೇ ದೃಷ್ಟಿಯಲ್ಲಿ ಇಟ್ಟುಕೊಳ್ಳದೆ ಆಹಾರಕ್ಕೆ ಬೇಕಾಗುವ ಆಹಾರ ಬೆಳೆಗಳನ್ನೂ ಮಣ್ಣಿನ ಸತ್ವಕ್ಕೆ, ಜಲಸಂರಕ್ಷಣೆಗೆ, ಜಲ ಇಳುವರಿಗೆ ಧಕ್ಕೆ ತರದಂತಹ ಸೂಕ್ತ ಮರಗಳನ್ನು ಬೆಳೆಸಿ ಕೊಳ್ಳಬೇಕು. ಜೊತೆಗೆ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಜೇನು ಕೃಷಿ, ತೋಟಗಾರಿಕೆ ಬೆಳೆ ಮತ್ತಿತರ ಸಮಗ್ರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದೇ ಆದರೆ ವ್ಯವಸಾಯ ಹೆಚ್ಚು ಅರ್ಥ ಬದ್ಧವಾಗುವುದು. ■

***

## ವರದಿ

### ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಜುಲೈ 2021ರಿಂದ ಸೆಪ್ಟಂಬರ್ 2021ರವರೆಗಿನ ಕಾರ್ಯಕ್ರಮಗಳು

**ಕಾರ್ಯದರ್ಶಿ, ಕೃಷಿ ಅರಣ್ಯ ಸಂಸ್ಥೆ ಮೊ: 94480 19306**

1. ದಿ:12–07–2021ರಂದು ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ 38ನೇ ಕಾರ್ಯಕಾರಿ ಸಮಿತಿ ಸಭೆಯನ್ನು ಶ್ರೀ ದೀಪಕ್ ಶರ್ಮರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

2. ದಿ:12–07–2021ರಂದು ಕೃಷಿವನ ತ್ರೈಮಾಸಿಕ ವಾರ್ತಾಪತ್ರ ಏಪ್ರಿಲ್–ಜೂನ್ 2021ರ ಸಂಚಿಕೆಯನ್ನು ಶ್ರೀ ವಿಜಯ್ ಕುಮಾರ್ ಗೋಗಿ, ಭಾ.ಅ.ಸೇ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ) ಇವರು ಬಿಡುಗಡೆ ಮಾಡಿದರು.

3. ಸಂಸ್ಥೆಯ ಕಾರ್ಯದರ್ಶಿಗಳು ಜುಲೈ, ಆಗಸ್ಟ್, ಸೆಪ್ಟೆಂಬರ್ 2021ರ ಮಾಹೆಗಳಲ್ಲಿ ಭಾರತೀಯ ಅರಣ್ಯ ಕಾಯ್ದೆ, ಕರ್ನಾಟಕ ಅರಣ್ಯ ಅಧಿನಿಯಮ ಹಾಗೂ ಅರಣ್ಯ ಸಂರಕ್ಷಣಾ ಅಧಿನಿಯಮ ಇವುಗಳ ಬಗ್ಗೆ 9 ತಂಡಗಳಲ್ಲಿ ರಾಜ್ಯದ 270 ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರುಗಳಿಗೆ ಕರ್ನಾಟಕ ಜ್ಯುಡಿಷಿಯಲ್ ಅಕಾಡೆಮಿ ವತಿಯಿಂದ ಆಯೋಜಿಸಿದ್ದ, 'ಪರಿಸರ ಕಾನೂನು ಕಾರ್ಯಾಗಾರದಲ್ಲಿ' ಆನ್ಲೈನ್ ಮೂಲಕ ಉಪನ್ಯಾಸಗಳನ್ನು ನೀಡಿರುತ್ತಾರೆ. ಆ ಸಂದರ್ಭದಲ್ಲಿ ಭಾರತದ ರಾಷ್ಟ್ರೀಯ ಅರಣ್ಯ ನೀತಿಯಂತೆ ಅರಣ್ಯವನ್ನು ಹೆಚ್ಚಿಸಲು ಸಾಮಾಜಿಕ ಅರಣ್ಯ, ಕೃಷಿ ಅರಣ್ಯ ಹೆಚ್ಚಿಸುವ ಬಗ್ಗೆಯೂ ವಿವರಿಸಲಾಗಿದೆ. ಅರಣ್ಯ ಸಂಪನ್ಮೂಲಗಳ ಸಂರಕ್ಷಣೆಯ ಬಗ್ಗೆ ಉಚ್ಛ ನ್ಯಾಯಾಲಯ ಹಾಗೂ ಸರ್ವೋಚ್ಛ ನ್ಯಾಯಾಲಯಗಳ ತೀರ್ಪುಗಳ ಚರ್ಚೆಯೊಂದಿಗೆ ಮಾನ್ಯ ನ್ಯಾಯಾಧೀಶರುಗಳೊಡನೆ ಮಾಹಿತಿ ಹಂಚಿಕೊಳ್ಳಲಾಯಿತು.

4. ದಿ:31–07–2021ರಂದು ಕಾರ್ಯದರ್ಶಿಯವರು ಈ ದಿನ ಸಂಜೆ ರೋಟರಿ ಬೆಂಗಳೂರು ದಕ್ಷಿಣ ಇವರು ಆಯೋಜಿಸಿದ್ದ 'Vocational Excellency Award -2020-21' ಕಾರ್ಯಕ್ರಮದಲ್ಲಿ ಭಾಗವಹಿಸಿ ಅರಣ್ಯ, ಪರಿಸರ ಹಾಗೂ ಕೃಷಿ ಅರಣ್ಯದ ಬಗ್ಗೆ ಉಪನ್ಯಾಸ ನೀಡಿರುತ್ತಾರೆ.

5. ದಿ:04–08–2021ರಂದು ಟ್ರೀ ಲ್ಯಾಂಡ್ಸ್ ಡೆವಲಪ್‌ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಇವರು ವರ್ಚ್ಯುಯಲ್ ಮೀಟ್ ಮೂಲಕ ಆಯೋಜಿಸಿದ್ದ ಕೃಷಿ ಅರಣ್ಯದ ಉತ್ಪನ್ನಗಳಾದ ಟಿಂಬರ್ ಹಾಗೂ ಇತರೆ ಉತ್ಪನ್ನಗಳನ್ನು E-trading ಕುರಿತ ಸಂವಾದದಲ್ಲಿ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ರೈತರು ಇತರರು ಭಾಗವಹಿಸಿದ್ದರು. ಸಂವಾದದಲ್ಲಿ ಕೃಷಿ ಅರಣ್ಯ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದಂತೆ ಆನ್‌ಲೈನ್ ವೇದಿಕೆ ಕಲ್ಪಿಸಿ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಅನುಕೂಲ ಕಲ್ಪಿಸಲು ಮಾರ್ಗಗಳನ್ನು ಚರ್ಚಿಸಲಾಯಿತು.

6. ದಿ:16–08–2021ರಂದು ಬೆಂಗಳೂರಿನ ನ್ಯಾಷನಲ್ ಸ್ಕೂಲ್ ಆಫ್ ಲಾ ಮತ್ತು ಕೇಂದ್ರದ ಪರಿಸರ, ಅರಣ್ಯ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ ಸಹಯೋಗದೊಡನೆ ಭಾರತೀಯ ಅರಣ್ಯ ಸೇವಾ ಅಧಿಕಾರಿಗಳಿಗೆ ಆಯೋಜಿಸಿದ್ದ 'ಖಾಸಗಿ ಅರಣ್ಯ ಸಮಸ್ಯೆಗಳು, ಸವಾಲುಗಳು ಮತ್ತು ಸುಧಾರಣೆಗಳು' ತರಬೇತಿ ಕಾರ್ಯಕ್ರಮದಲ್ಲಿ ಖಾಸಗಿ ಅರಣ್ಯಗಳ ಅಭಿವೃದ್ಧಿ ಹಾಗೂ ಅರಣ್ಯ ಸಂರಕ್ಷಣಾ ಅಧಿನಿಯಮಕ್ಕೆ ತರಲಾಗುವ ತಿದ್ದುಪಡಿಗಳ ಬಗ್ಗೆ ಉಪನ್ಯಾಸ ನೀಡಲಾಯಿತು.

7. ದಿ:30–08–2021ರಂದು ನೆಲಮಂಗಲ ತಾಲ್ಲೂಕಿನ ಕುದೂರು ಬಳಿ ಡಾ. ಚಂದ್ರಶೇಖರ್ ಅವರ ಕೃಷಿ ಅರಣ್ಯ ಹಾಗೂ ತೋಟಗಾರಿಕೆ ಕ್ಷೇತ್ರಕ್ಕೆ ಹಾಗೂ ಅಡಿಕೆ ತೋಟದಲ್ಲಿ ಏಲಕ್ಕಿ ಬೆಳೆಯುತ್ತಿರುವ ಪ್ರಾಯೋಗಿಕ ಕ್ಷೇತ್ರಕ್ಕೆ ಭೇಟಿ ನೀಡಿ, ಮಾವಿನ ತೋಟದ ಸುತ್ತಲೂ ಸಾಗುವಾನಿ ಮರಗಳನ್ನು ನೆಟ್ಟಿರುವ ಪ್ರಾತ್ಯಕ್ಷಿಕೆ ಹಾಗೂ ಕೃಷಿ ಭೂಮಿಯಲ್ಲಿ ಮರಗಳನ್ನು ನೆಡಲು ಸಣ್ಣ ಗುಂಡಿಗಳನ್ನು ತೆಗೆಯಲು ಅರ್ಥ್ ಅಗಾರ್ (Earth Auger) ಉಪಕರಣ ಬಳಕೆಯ ಕುರಿತು ಪ್ರಾತ್ಯಕ್ಷಿಕೆಯನ್ನು ಮಾಡಲಾಯಿತು.



8. ದಿ:30–09–2021ರಂದು ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ ಕೃಷಿ ಅರಣ್ಯ ಕ್ಷೇತ್ರಗಳಿಗೆ ಭೇಟಿ ನೀಡಿ ಬಿಜಾಪುರ ಜಿಲ್ಲೆಯ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಕೃಷಿ ಅರಣ್ಯದ ಪ್ರಾಮುಖ್ಯತೆ ಬಗ್ಗೆ ಚರ್ಚಿಸಲಾಯಿತು.

9. ದಿ:30–09–2021ರಂದು ಅರಣ್ಯ ಭವನದಲ್ಲಿ ಅರಣ್ಯ ಇಲಾಖೆ, ಟ್ರೀ ಲ್ಯಾಂಡ್ಸ್ ಡೆವಲಪ್‌ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಮತ್ತು MSTC ಜೊತೆಗೂಡಿ "ಕೃಷಿ ಅರಣ್ಯ ರೈತರಿಗೆ ಅನುಕೂಲವಾಗುವಂತೆ ಆನ್‌ಲೈನ್ ವೇದಿಕೆ ಕಲ್ಪಿಸುವುದು" ಇದರ ಕುರಿತು ಸಂವಾದ ನಡೆಸಲಾಯಿತು. ಇದರಲ್ಲಿ ಸಂಸ್ಥೆಯ ಅಧ್ಯಕ್ಷರು ಭಾಗವಹಿಸಿ ಚರ್ಚಿಸಲಾಯಿತು.

# ಕೃಷಿಅರಣ್ಯ ಮತ್ತು ಕೃಷಿ ಅಭಿವೃದ್ಧಿ

**ಶ್ರೀ ದೀಪಕ್ ಶರ್ಮ**, ಭಾ.ಅ.ಸೇ.(ನಿವೃತ್ತ), ಮೊ: 99862 32094, **ಶ್ರೀ ಹೆಚ್.ಜಿ. ಶಿವಾನಂದಮೂರ್ತಿ**, ಭಾ.ಅ.ಸೇ.(ನಿವೃತ್ತ), ಮೊ: 94481 26246

ಅರಣ್ಯ ಇಲಾಖೆಯ ಆಡಳಿತದಲ್ಲಿರುವ ಸಮಗ್ರ ಅರಣ್ಯಗಳ ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಕೃಷಿ ಅರಣ್ಯಗಳು ನಿರ್ವಹಿಸುವ ಬಹು ಮುಖ್ಯ ಪಾತ್ರದ ಬಗ್ಗೆ ನಮೂದಿಸಲಾಗಿದೆ. ಕೃಷಿ ಅರಣ್ಯಗಳಿಂದ ಫಾರಂ ಫಾರೆಸ್ಟ್ರಿ ಮತ್ತು ಪೂರಕ ಪದ್ಧತಿಗಳಿಂದ ಉತ್ಪತ್ತಿಯಾಗುವ ಜೀವರಾಶಿಯು ನೈಸರ್ಗಿಕ ಅರಣ್ಯಗಳ ಮೇಲೆ ಉಂಟಾಗುವ ಜನರ ಅವಲಂಬನೆಯನ್ನು ಕಡಿಮೆಗೊಳಿಸಲಿದೆ. ಕಳೆದ ಐದಾರು ದಶಕಗಳಿಂದ ನೈಸರ್ಗಿಕ ಅರಣ್ಯಗಳ ಮೇಲೆ ಹೆಚ್ಚಿರುವ ಜೈವಿಕ ಒತ್ತಡವನ್ನು ಕಡಿಮೆಗೊಳಿಸಲು ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳನ್ನು ಪಾರಂಪರಿಕ ಅರಣ್ಯಗಳ ಒಳಗೆ ಮತ್ತು ಹೊರಗಡೆ ಬೆಳೆಸಲಾಗಿದ್ದರೂ, ರಾಜ್ಯದಲ್ಲಿ ಅರಣ್ಯದ ಹೊದಿಕೆಯ ಹೆಚ್ಚಳವು ಉಪಗ್ರಹ ಆಧಾರಿತ ಮಾಹಿತಿಯಿಂದ ತಿಳಿದು ಬಂದಂತೆ ತೀರಾ ಕಡಿಮೆಯೆನಿಸುತ್ತದೆ, ಈ ಎಲ್ಲಾ ನೆಡುತೋಪುಗಳು ಕೆಲವೇ ವರ್ಷಗಳಲ್ಲಿ ಅಕ್ಕಪಕ್ಕದ ನಿವಾಸಿಗಳಿಂದ ಉಂಟಾಗುತ್ತಿರುವ ಅಕ್ರಮ ಕಡಿತಲೆಯಿಂದಾಗಿ ಮತ್ತು ಅವರಿಗೆ ಬೇಕಾಗಿರುವ ಜೀವರಾಶಿಗಾಗಿ ನೆಡುತೋಪುಗಳು ನಾಶ ಹೊಂದುತ್ತಿವೆ. ಈ ಪರಿಣಾಮದಿಂದಾಗಿ ರಾಜ್ಯದ ಅರಣ್ಯದ ಹೊದಿಕೆಯಲ್ಲಿ ಕಣ್ಣಿಗೆ ಕಾಣುವಂತಹ ಏರಿಕೆಯಾಗಿರುವುದಿಲ್ಲ. ನಾವು ನೋಡಿರುವಂತೆ, ಇತ್ತೀಚಿನ ವರ್ಷಗಳಲ್ಲಿ ಕೃಷಿ ಅರಣ್ಯ ಮತ್ತು ಪೂರಕ ಚಟುವಟಿಕೆಗಳು, ತೋಟಗಾರಿಕಾ ನೆಡುತೋಪುಗಳನ್ನು ಪಾರಂಪರಿಕ ಅರಣ್ಯಗಳ ಹೊರಗಡೆ ಬೆಳೆಸಲಾಗಿರುವುದರಿಂದ ರಾಜ್ಯದಲ್ಲಿ ಅರಣ್ಯ ಮತ್ತು ಮರಗಳ ಹೊದಿಕೆಯ ಹೆಚ್ಚಳವು ಕಣ್ಣಿಗೆ ಕಾಣುವಂತಹ ಕೊಡುಗೆಯಾಗಿರುತ್ತವೆ. ಇಂತಹ ಪದ್ಧತಿಗಳು, ಇದೇ ಗತಿಯಲ್ಲಿ ಮುಂದುವರೆದಲ್ಲಿ ಕೃಷಿ ಅರಣ್ಯ ಮತ್ತು ಪೂರಕ ಚಟುವಟಿಕೆಗಳು ರಾಜ್ಯದಲ್ಲಿ ಅರಣ್ಯ ಮತ್ತು ಮರಗಳ ಹೊದಿಕೆಯ ಹೆಚ್ಚಳಕ್ಕೆ ಮಹತ್ವದ ಕೊಡುಗೆಯನ್ನು ನೀಡಿದಂತಾಗುವುದು. ರಾಷ್ಟ್ರದ ಗುರಿಯಾದ ಶೇ.33 ರ ರಾಜ್ಯದ ಭೌಗೋಳಿಕ ಪ್ರದೇಶದಲ್ಲಿ ಅರಣ್ಯ ಮತ್ತು ಮರಗಳ ಹೊದಿಕೆಯನ್ನು ಹೆಚ್ಚಿಸಲು ಕೃಷಿ ಅರಣ್ಯ, ಫಾರಂ ಫಾರೆಸ್ಟ್ರಿ ಮತ್ತು ತೋಟಗಾರಿಕಾ ನೆಡುತೋಪುಗಳನ್ನು ಉದಾರವಾಗಿ ರಾಜ್ಯದ ಉದ್ದಗಲಕ್ಕೂ ಬೆಳೆಯುವುದರಿಂದ ಮಾತ್ರ ಸಾಧ್ಯವಾಗುವುದು.

ಕರ್ನಾಟಕದ ಅರೆಮಲೆನಾಡು ಮತ್ತು ಮೈದಾನ ಪ್ರದೇಶಗಳು ಒಂದಾನೊಂದು ಕಾಲದಲ್ಲಿ ಕೃಷಿ ಭೂಮಿಯ ಸಮೀಪದಲ್ಲಿದ್ದಂತ ಸ್ವಾಭಾವಿಕ ಹಸಿರನ್ನು (ಗಿಡಮರಗಳು) ಇಂದು ನಾಶಗೊಳಿಸಿರುವುದರಿಂದ ಮರಗಳಿಂದ ಕೃಷಿ ಭೂಮಿಗೆ ಬಹಳ ವರ್ಷಗಳಿಂದ ದೊರಕುತ್ತಿದ್ದ ಲಾಭ ಇಲ್ಲದಂತಾಗಿದೆ. ಆದ್ದರಿಂದ ಕೃಷಿ ಅರಣ್ಯ ಪದ್ಧತಿಯು ಈ ಪ್ರದೇಶಗಳಿಗೆ ತೀರಾ ಅವಶ್ಯಕವಾದ ವರವಾಗಿ ಪರಿಣಮಿಸಲಿವೆ. ಇಲ್ಲಿ ಸಮಗ್ರ ಕೃಷಿ ಪದ್ಧತಿಯೊಂದಿಗೆ ಮರಗಳನ್ನು ಬೆಳೆಯುವುದರಿಂದ ಬಹಳ ಹಿಂದಿನ ದಿನಗಳಲ್ಲಿ ಮರಗಳಿಂದ ದೊರೆಯುತ್ತಿದ್ದ ಲಾಭಗಳನ್ನು ಕೃಷಿ ಭೂಮಿಗೆ ಪುನಃ ಒದಗಿಸಿದಂತಾಗುವುದು.

ಕೃಷಿ ಅರಣ್ಯಗಳಿಂದ ದೊರೆಯುವ ಲಾಭದ ಜೊತೆಗೆ ಒಟ್ಟಾರೆಯಾಗಿ ಅರಣ್ಯಗಳ ಸಂರಕ್ಷಣೆಯಾಗುವುದು. ಕೃಷಿ ಅರಣ್ಯವು ಕೃಷಿ ಅಭಿವೃದ್ಧಿಗೆ ಅನೇಕ ರೀತಿಯಲ್ಲಿ ಅಂದರೆ ರೈತರಿಗೆ ಆದಾಯ ತರುವಲ್ಲಿ ಹಾಗೂ ಸುತ್ತಲಿನ ವಾತಾವರಣವನ್ನು ಹಸನುಗೊಳಿಸುವಲ್ಲಿ ಸಹಾಯಕವಾಗಿದೆ.

ಕೃಷಿ ಅರಣ್ಯ ಪದ್ಧತಿಯು ಅನೇಕ ವಿಧದಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಸಹಾಯಕವಾಗಿದೆ. ಅರಣ್ಯದ ಮರಗಳಲ್ಲಿ ನೆರಳು, ಉದುರಿದ ಎಲೆಗಳು ಮತ್ತು ಬೇರುಗಳು, ಮಣ್ಣು ಮತ್ತು ನೀರಿನ ಸವಕಳಿಯನ್ನು ತಪ್ಪಿಸಲು ಬಹಳ ಮಹತ್ವದ ಪಾತ್ರ ನಿರ್ವಹಿಸುತ್ತವೆ. ಮರಗಳು ಮತ್ತು ಪೊದೆಗಳು ಪರಿಣಾಮಕಾರಿಯಾಗಿ ಮಳೆಯ ನೀರು ಭೂಮಿಯಲ್ಲಿ ಇಂಗಲು ಸಹಕಾರಿಯಾಗಿದ್ದು, ಇದರಿಂದ ನೀರಿನ ಹರಿವನ್ನು ನಿಯಂತ್ರಿಸಲಿದೆ. ಮರಗಳು ಮತ್ತು ಪೊದೆಗಳು ಅವುಗಳ ಬೇರಿನಲ್ಲಿ ಮಣ್ಣನ್ನು ಹಿಡಿದಿಡಲು ಮತ್ತು ತೇವಾಂಶವನ್ನು ಹಿಡಿದಿಡಲು ಸಹಾಯಕವಾಗಿದೆ. ತೆರೆದ ಕೃಷಿ ಭೂಮಿಯಲ್ಲಿ, ಗಾಳಿಯಿಂದ ಬಹಳಷ್ಟು ಮಣ್ಣಿನ ಮತ್ತು ನೀರಿನ ನಷ್ಟವುಂಟಾಗುವುದು. ಇದರಿಂದ ಮಣ್ಣಿನಲ್ಲಿ ನಿರ್ಜಲೀಕರಣ ಅಥವಾ ನೀರಿನ ಅಂಶವನ್ನು ತುಂಬಾ ಕಡಿಮೆಯಾಗುವುದು. ಮಣ್ಣಿನ ಕಣಗಳು ಬಿರುಸಾದ ಗಾಳಿಯಿಂದ ತುಂಬಾ ದೂರಕ್ಕೆ ಗಾಳಿಯ ಜೊತೆಯಲ್ಲಿಯೇ ಹೋಗುವವು. ಗಾಳಿಯು ಭೂಮಿಯ ಮೇಲ್ಭಾಗದ ಮಣ್ಣಿನಿಂದ ನೀರಿನ ಆವಿಯಾಗುವಿಕೆಯನ್ನು ಹೆಚ್ಚಿಸುವುದು. ಕೃಷಿ ಭೂಮಿಯಲ್ಲಿಯ ಮರಗಳು ಗಾಳಿಯ ವೇಗ ಕಡಿಮೆಮಾಡುವುದರಿಂದ ಮಣ್ಣು ಮತ್ತು ತೇವಾಂಶದ ನಷ್ಟವನ್ನು ಕಡಿಮೆಗೊಳಿಸಬಲ್ಲವು. ಮರಗಳಿಂದ ಆಗುವ ಲಾಭವನ್ನು ಗಾಳಿಯ ವೇಗವನ್ನು ನಿಯಂತ್ರಿಸುವಲ್ಲಿ ಕೃಷಿ ಅರಣ್ಯ ಪದ್ಧತಿಯಲ್ಲಿ ಸಮರ್ಪಕವಾಗಿ ಉಪಯೋಗಿಸಬಹುದು. ಅಂದರೆ ಗಾಳಿಯ ತಡೆಗಳಾಗಿ ಮತ್ತು ನೆರಳಿನ ತಡೆಗಳಾಗಿ ಸಮರ್ಪಕವಾದ ರೀತಿಯಲ್ಲಿ ಬೆಳೆಯುವುದರಿಂದ ಕೃಷಿ ಅರಣ್ಯದ ಸದುಪಯೋಗವಾಗಲಿದೆ. ಮರಗಳಿಂದ ಕೃಷಿ ಭೂಮಿಯ ಮೇಲೆ ಸ್ವಲ್ಪಮಟ್ಟಿಗೆ ನೆರಳಾಗುವುದರಿಂದ, ದೀರ್ಘಕಾಲ ತೇವಾಂಶವನ್ನು ಮಣ್ಣಿನಲ್ಲಿ ಹಿಡಿದಿಡಲು ಸಹಾಯಕವಾಗಿದೆ. ಇನ್ನು ಕೆಲವು ಕೃಷಿ ಅರಣ್ಯ ಪದ್ಧತಿಯಲ್ಲಿ ಮರಗಳ ನೆರಳನ್ನು ರೆಂಬೆ ಕೊಂಬೆಗಳನ್ನು ಕತ್ತರಿಸುವುದರ ಮುಖಾಂತರ ನಿಯಂತ್ರಿಸುವುದು. ಸಮರ್ಪಕವಾದ ಕೃಷಿ ಬೆಳೆ ಉತ್ಪಾದನೆಗೆ ಪೂರಕವಾಗಲಿದೆ. ಇದರಿಂದ ಉಂಟಾಗುವ ಜೀವರಾಶಿ ಅಂದರೆ ಎಲೆ, ರೆಂಬೆ ಕೊಂಬೆಗಳು, ಮೇವು ಇದರಿಂದ ಮಣ್ಣಿನಲ್ಲಿ ಸಾವಯವ ಅಂಶವನ್ನು ಮತ್ತು ಫಲವತ್ತತೆಯನ್ನು ಹೆಚ್ಚಿಸುವಲ್ಲಿ ಮತ್ತು ಜಾನುವಾರು ಸಾಕಾಣಿಕೆಗೆ ಪೂರಕವಾಗಿದೆ.

ಕೃಷಿ ಅರಣ್ಯ ಪದ್ಧತಿಯು ಮಣ್ಣಿನ ಫಲವತ್ತತೆಯನ್ನು ಅನೇಕ ವಿಧಗಳಲ್ಲಿ ಹೆಚ್ಚಿಸಲಿದೆ. ಅಂದರೆ ಮರಗಳ ಅನೇಕ ಭಾಗಗಳು ಹಾಗೂ ಬೇರುಗಳು ಮಣ್ಣಿನ ಫಲವತ್ತತೆಯನ್ನೂ ಹೆಚ್ಚಿಸುತ್ತದೆ. ಸತತವಾಗಿ ಬೀಳುವ ಎಲೆಗಳು ರೆಂಬೆಕೊಂಬೆಗಳು ಹಾಗೂ ಮರಗಳ ಎಲ್ಲಾ ತರದ ಭಾಗಗಳು ಮಣ್ಣಿನಲ್ಲಿ ಸೇರ್ಪಡೆಯಾಗಿ ಮಣ್ಣಿನಲ್ಲಿ ಪೋಷಕಾಂಶಗಳನ್ನು ಹೆಚ್ಚಿಸಲಿವೆ. ಸತತವಾಗಿ ಮಣ್ಣಿನಲ್ಲಿ ಸೇರ್ಪಡೆಯಾಗುವ ಮರಗಳ ವಿವಿಧ ಭಾಗಗಳು ಅಂದರೆ ಉದುರುವ ಎಲೆಗಳು ಮತ್ತು ರೆಂಬೆ ಕೊಂಬೆಗಳು, ಹೂವು, ಕಾಯಿ ಮುಂತಾದವುಗಳು, ಕೊಳೆಯುವುದರಿಂದ (ವಿಭಜನೆ) ಮಣ್ಣಿನ ರಚನೆಯನ್ನು ಹೆಚ್ಚಿಸಲಿದೆ. ಮರಗಳು ಭೂಮಿಯ ಆಳದಿಂದ ಪೋಷಕಾಂಶಗಳನ್ನು ಪಡೆದು ಭೂಮಿಯ ಮೇಲ್ಪದರಕ್ಕೆ ತರುವುದರಿಂದ, ಕೃಷಿ ಬೆಳೆಗೆ ಹೆಚ್ಚಿನ ರೀತಿಯಲ್ಲಿ ಪೋಷಕಾಂಶಗಳು ದೊರೆಯುವಂತೆ ಮಾಡುತ್ತದೆ. ಇದರಲ್ಲಿ ಆಳವಾದ ಬೇರುಗಳುಳ್ಳ ಮರಗಳು ಬಹಳ ಪರಿಣಾಮಕಾರಿಯಾಗಿವೆ. ಏಕೆಂದರೆ ಮಣ್ಣಿನ ಆಳದಿಂದ ಪೋಷಕಾಂಶಗಳನ್ನು ಪಡೆದು ಮೇಲ್ಪದರಕ್ಕೆ ಹರಡುವುದರಿಂದ ಕೃಷಿ ಬೆಳೆಗೆ ಬಹಳ ಪೂರಕವಾಗಿದೆ. ಇಲ್ಲವಾದಲ್ಲಿ ಕೃಷಿ ಬೆಳೆಗಳು ಭೂಮಿಯ ಆಳದಿಂದ ಪೋಷಕಾಂಶಗಳನ್ನು ಪಡೆಯಲು ಸಾಧ್ಯವಿಲ್ಲ. ಕಾರಣ ಬೇರುಗಳು ಅಷ್ಟು ಆಳಕ್ಕೆ ಹೋಗುವುದಿಲ್ಲ. ವಿಶೇಷವಾಗಿ ಸಾರಜನಕವನ್ನು ($N_2$) ಭೂಮಿಯಲ್ಲಿ ಹಿಡಿದಿಡುವ ಮರಗಳಿಂದ ಮತ್ತು ಪೊದೆಗಳಿಂದ ಹೆಚ್ಚಿನದಾಗಿ ಸೇರ್ಪಡೆಯಾಗುವುದು. ಮರದ ವಿವಿಧ ಭಾಗಗಳು ಕೊಳೆಯುವುದರಿಂದ ಅಥವಾ ವಿಭಜನೆ ಹೊಂದುವುದರಿಂದ, ಮರಗಳ ರೆಂಬೆ ಕೊಂಬೆಗಳನ್ನು ಕಡಿಯುವುದರಿಂದ ಸಹ, ಮಣ್ಣಿನಲ್ಲಿ ಸಾವಯವ ವಸ್ತುಗಳನ್ನು ಸೇರ್ಪಡೆಗೊಳಿಸುವುದರಿಂದ ಹಾಗೂ ಜೈವಿಕ ಚಟುವಟಿಕೆಯಿಂದಾಗಿ ಮಣ್ಣಿನ ಫಲವತ್ತತೆಯನ್ನು ತೃಪ್ತಿಕರವಾದ ಮಟ್ಟದಲ್ಲಿ ನಿರ್ವಹಿಸುತ್ತವೆ. ಅಂದಾಜಿನ ಪ್ರಕಾರ ಮರದ ಎಲೆಗಳು ಮತ್ತು ರೆಂಬೆ ಕೊಂಬೆಗಳು ಕನಿಷ್ಟ ಶೇ.20ರಷ್ಟು ನೆರಳು ನೀಡುವುದರಿಂದ ಮಣ್ಣಿನಲ್ಲಿಯ ಸಾವಯವ ಅಂಶವನ್ನು ಉತ್ತಮವಾಗಿ ನಿರ್ವಹಿಸಲು ಸಾಧ್ಯವಾಗುವುದು. ಮಣ್ಣಿನಲ್ಲಿ ಸಾವಯವ ಅಂಶಗಳ ನಿರ್ವಹಿಸುವಲ್ಲಿ ಮರಗಳ ಬೇರುಗಳು ಬಹಳ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿವೆ.

ಮುಂದಿನ ಪುಟಕ್ಕೆ...

ಇದರಿಂದ ಮಣ್ಣಿನ ಭೌತಿಕ ರಚನೆಗೆ ಕೃಷಿಗಿಂತಲೂ ಹೆಚ್ಚಿನದಾಗಿ ಸಹಕಾರಿಯಾಗಿದೆ. ಮರಗಳು ಪೋಷಕಾಂಶಗಳ ಪುರ್ನಬಳಕೆಯ ಕಾರ್ಯದಲ್ಲಿ ಕೃಷಿ ಬೆಳೆಗಿಂತಲೂ ಹೆಚ್ಚಿನ ಪರಿಣಾಮಕಾರಿಯಾಗಿ ಪೋಷಕಾಂಶಗಳ ಚಕ್ರವನ್ನು ಬಳಸಿಕೊಳ್ಳಲಿವೆ.

ಕೃಷಿ ಅರಣ್ಯವನ್ನು ಸಮಸ್ಯಾತ್ಮಕ ಕೃಷಿ ಭೂಮಿಯ ಸದ್ಬಳಕೆಗೆ ಉಪಯೋಗಿಸಲು ಸೂಕ್ತವಾಗಿದೆ. ಕರ್ನಾಟಕದಲ್ಲಿ ಶೇ.40ಕ್ಕಿಂತಲೂ ಹೆಚ್ಚಿನ ಕೃಷಿ ಭೂಮಿಯಲ್ಲಿ ನೀರಿನ ಲಭ್ಯತೆ ತೀರಾ ಕಡಿಮೆಯಿದೆ. ಇಂತಹ ಭೂಮಿಯಲ್ಲಿ ಬಹುವಾರ್ಷಿಕ ಕೃಷಿ ಬೆಳೆಯಲು ಸುಸ್ಥಿರವಾಗಿರುವುದಿಲ್ಲ ಮತ್ತು ಇದರಿಂದ ಭೂಮಿಯು ಮತ್ತಷ್ಟು ಅವನತಿ ಹೊಂದಲಿದೆ. ಇಂತಹ ಭೂಮಿಯಲ್ಲಿ ಬಹುವಾರ್ಷಿಕ ಮರದ ಬೆಳೆಯಾದ ತೋಟಗಾರಿಕಾ ಮರಗಳು, ರೇಷ್ಮೆ ಅಥವಾ ಕೃಷಿ ಅರಣ್ಯ ಬೆಳೆಸುವುದು ಸೂಕ್ತವಾಗಿರುತ್ತದೆ. ಹೇಳಬೇಕೆಂದರೆ ಮರಗಳು ಕೊಳವೆ ಬಾವಿಗಳ ಮಾದರಿಯಲ್ಲಿ ಮಣ್ಣಿನಿಂದ ನೀರನ್ನು ಪಡೆದು ಗಾಳಿಯಲ್ಲಿ ಆವಿಯಾಗಲು ಸಹಕಾರಿಯಾಗಿದೆ. ಇದರಿಂದ ಭೂಮಿಯಲ್ಲಿ ಅಂತರ್ಜಲದ ಮಟ್ಟ ಕಡಿಮೆಯಾಗುವುದು ಮತ್ತು ಇದರಿಂದ ಸವಳು ಭೂಮಿಯಾಗುವುದನ್ನು ತಡೆಗಟ್ಟಲಿದೆ. ಇಂತಹ ಪರಿಸ್ಥಿತಿಯು ನೀರಾವರಿ ಕೃಷಿ ಭೂಮಿಯಲ್ಲಿ ಆಗಾಗ್ಗೆ ಕಂಡುಬರುವ ದೃಷ್ಯವಾಗಿದೆ. ಇದರಿಂದ ಕೃಷಿ ಭೂಮಿಯು ಜವಳಾಗಿ ಅಂದರೆ ನೀರು ಇಂಗದೆ ಇರುವುದರಿಂದ ಉತ್ತಮವಾದ ಕೃಷಿ ಉತ್ಪಾದನೆಗೆ ಅಡಚಣೆಯಾಗುವುದರಿಂದ, ಸೂಕ್ತವಾದ ಮರದ ಬೆಳೆಗಳನ್ನು ಲಾಭದಾಯಕವಾಗಿ ಬೆಳೆಯಬಹುದು. ಇಂತಹ ಮರಗಳು ಸುತ್ತಮುತ್ತಲಿನ ಭೂಮಿಯಲ್ಲಿಯ ಅಂತರ್ಜಲದ ಮಟ್ಟವನ್ನು ನಿಧಾನವಾಗಿ ಕಡಿಮೆಗೊಳಿಸಲಿವೆ ಹಾಗೂ ಭೂಮಿಯ ಸದುಪಯೋಗ ಪಡಿಸಿಕೊಂಡಂತಾಗುವುದು. ಇಲ್ಲಿ ವಿಶೇಷವಾಗಿ ಮೇವಿನ ಬೆಳೆಯನ್ನು ಬೆಳೆಯಲು ಅಥವಾ ಸೂಕ್ತವಾದ ಆಯ್ದ ಬೆಳೆಗಳನ್ನು ಬೆಳೆಯಲು ಸಾಧ್ಯವಾಗುವುದು.

ಕೃಷಿ ಅರಣ್ಯ ಪದ್ಧತಿಯು, ರೈತರಿಗೆ ಅನೇಕ ಆರ್ಥಿಕ ಲಾಭಗಳನ್ನು ತಂದುಕೊಡುವುದು. ಇದರಿಂದ ರೈತರ ಆರ್ಥಿಕತೆಯನ್ನು ಸಬಲಗೊಳಿಸಲು ಆಯಾ ಪ್ರದೇಶಗಳಲ್ಲಿ ಮತ್ತು ರಾಷ್ಟ್ರದಲ್ಲಿ ಸಾಧ್ಯವಾಗುವುದು. ಕೃಷಿ ಅರಣ್ಯದಿಂದ ಉತ್ಪಾದಿಸುವ ಮರದ ದಿಮ್ಮಿಗಳು, ಉರುವಲು, ಮೇವು ಗೊಬ್ಬರ ಮತ್ತು ಇತರೆ ಮರದ ಉತ್ಪಾದನೆಗಳು ರೈತರಿಗೆ ನೇರವಾಗಿ ಲಾಭ ತಂದುಕೊಡಲಿವೆ. ಕೃಷಿ ಅರಣ್ಯ ಪದ್ಧತಿಯು ಬಹು ಹಂತದ ಬೆಳೆಯನ್ನು ಮರಗಳೊಂದಿಗೆ ಬೆಳೆಯುವುದರಿಂದ ಭೂಮಿಯಲ್ಲಿ ಒಂದೇ ಬೆಳೆಯನ್ನು ಬೆಳೆಯುವುದರಿಂದ ಉಂಟಾಗುವ ನಷ್ಟವನ್ನು ಕಡಿಮೆಗೊಳಿಸುವುದು. ಒಂದು ಬೆಳೆ ಹಾಳಾದರೂ ಮತ್ತೊಂದು ಬೆಳೆ ಇರುವುದರಿಂದ ರೈತರಿಗೆ ಬೆಳೆ ಹಾನಿಯಿಂದ ಉಂಟಾಗುವ ನಷ್ಟವನ್ನು ಕಡಿಮೆಗೊಳಿಸುವುದು. ಅಲ್ಲದೆ ಕೃಷಿ ಅರಣ್ಯ ಪದ್ಧತಿಯಿಂದ ದೊರೆಯುವ ಅನೇಕ ರೀತಿಯ ಉತ್ಪಾದನೆಗಳು ರೈತರ ಆರ್ಥಿಕ ನಷ್ಟವನ್ನು ತೊಡೆದು ಹಾಕಲಿವೆ. ಹೇಗೆಂದರೆ ಮೇವಿನ ಉತ್ಪಾದನೆ ವರ್ಷವಿಡೀ ದೊರೆಯುವುದರಿಂದ ಬೇಸಿಗೆ ಕಾಲದಲ್ಲಿ ಜಾನುವಾರುಗಳ ಸಾಕಾಣಿಕೆಗೆ ಪೂರಕವಾಗಲಿದೆ ಮತ್ತು ಉತ್ತಮ ರೀತಿಯಲ್ಲಿ ಜಾನುವಾರುಗಳ ಸಂವರ್ಧನೆಗೆ ಸಹಕಾರಿಯಾಗಲಿದೆ. ಸುಧಾರಿತ ಮತ್ತು ಸುಸ್ಥಿರವಾದ ಬೆಳೆಗಳ ಉತ್ಪಾದನಾ ಪದ್ಧತಿಯಿಂದ ರೈತರ ಆದಾಯದಲ್ಲಿ ಹೆಚ್ಚಳವಾಗಿರುವುದು ಗೋಚರಿಸುವುದು. ಒಟ್ಟಾರೆಯಾಗಿ ಕೃಷಿ ಅರಣ್ಯ ಪದ್ಧತಿಯಿಂದ ಗ್ರಾಮೀಣ ಭಾಗದ ಕೃಷಿ ಭೂಮಿಯನ್ನು ವಿವಿಧ ಉಪಯೋಗಗಳಿಗೆ ಬಳಸುವುದರಿಂದ ಕೃಷಿಯಲ್ಲಿ ಆರ್ಥಿಕತೆಯನ್ನು ಸುಸ್ಥಿರಗೊಳಿಸಲಿದೆ. ತನ್ಮೂಲಕ ಸಮುದಾಯದಲ್ಲಿ ಸುಸ್ಥಿರತೆಯನ್ನು ಉಂಟುಮಾಡುವುದು. ಇಷ್ಟೇ ಅಲ್ಲದೆ ಆರ್ಥಿಕ ಲಾಭಗಳೊಂದಿಗೆ, ಹೆಚ್ಚಿದ ಕೃಷಿ ಉತ್ಪಾದನೆ ಮತ್ತು ಮರಗಳ ಉತ್ಪಾದನೆಯು ಸಾಮಾಜಿಕವಾಗಿಯೂ ಸಹ ಲಾಭ ತಂದುಕೊಡುವುದು. ಈ ಲಾಭಗಳು ಗ್ರಾಮೀಣ ಜನರ ಆರ್ಥಿಕತೆಯನ್ನು ಹೆಚ್ಚಿಸುವುದರಿಂದ ಗ್ರಾಮೀಣ ಜೀವನ ಮಟ್ಟವನ್ನು ಸುಧಾರಿಸುವುದು. ಸುಸ್ಥಿರ ಉದ್ಯೋಗ ದೊರಕಲಿದೆ ಮತ್ತು ಆದಾಯವನ್ನು ಹೆಚ್ಚಿಸುವುದು, ಜನರಿಗೆ ಹೆಚ್ಚಿನ ಪೋಷಕಾಂಶಗಳು ಮತ್ತು ಗುಣಮಟ್ಟದ ಆಹಾರದ ಉತ್ಪಾದನೆಗಳು ದೊರೆಯುವುದರಿಂದ ಜನರ ಆರೋಗ್ಯದಲ್ಲಿ ಸುಧಾರಣೆಯಾಗಿ ಗುಣಮಟ್ಟದ ಜೀವನ ನಡೆಸಲು ಸಹಕಾರಿಯಾಗಿದೆ.

ಕೃಷಿ ಅರಣ್ಯಗಳು ಭೂಮಿಯ ಮೇಲ್ಭಾಗದ ಉಷ್ಣಾಂಶವನ್ನು ಮಣ್ಣಿನಿಂದ ತೇವಾಂಶ ಆವಿಯಾಗುವುದನ್ನು ಮರದ ನೆರಳಿನಿಂದ ಮತ್ತು ಬಿದ್ದಂತಹ ಕೊಂಬೆಗಳು ಮತ್ತು ಎಲೆಗಳು ಮಣ್ಣಿನ ಮೇಲ್ಭಾಗವನ್ನು ಮುಚ್ಚುವುದರಿಂದ ಕಡಿಮೆಗೊಳಿಸಲಿದೆ. ಇದು ಸ್ಥಳೀಯ ಹವಾಮಾನದ ನಿರ್ವಹಣೆಗೆ ಸಹಾಯಕವಾಗಲಿದೆ. ಈಗಾಗಲೇ ನೋಡಿರುವಂತೆ ಕೃಷಿ ಅರಣ್ಯಗಳು ಮಣ್ಣಿನ ಸವಕಳಿಯನ್ನು ತಪ್ಪಿಸುತ್ತವೆ. ಮಣ್ಣಿನಲ್ಲಿ ತೇವಾಂಶ ರಕ್ಷಿಸುತ್ತವೆ ಹಾಗೂ ಮಣ್ಣಿನ ಫಲವತ್ತತೆಯನ್ನೂ ಮುಂದುವರೆಸುತ್ತವೆ. ಈ ಗುಣಗಳು ಮಳೆ ಕಡಿಮೆ ಬೀಳುವ ಮತ್ತು ಸಕಾಲಕ್ಕೆ ಬಾರದೆ ಇರುವಂತಹ ಪ್ರದೇಶಗಳ ಕೃಷಿ ಭೂಮಿಯ ನಿರ್ವಹಣೆಗೆ ಮಹತ್ತರವಾದ ಕೊಡುಗೆಯನ್ನು ನೀಡಲಿದೆ. ಮುಂಬರುವ ದಿನಗಳಲ್ಲಿ ಹವಾಮಾನ ಬದಲಾವಣೆಯ ಪರಿಣಾಮದಿಂದ ಉಂಟಾಗುತ್ತಿರುವ ಅತಿ ಹೆಚ್ಚಿನ ಮಳೆ ಅಥವಾ ಬರಗಾಲದ ವರ್ಷಗಳು ಸರ್ವೆ ಸಾಮಾನ್ಯವಾಗಲಿದೆ. ಇವುಗಳಿಂದ ಮುಕ್ತಿ ಪಡೆಯಲು ಕೃಷಿ ಅರಣ್ಯಗಳು ರಕ್ಷಕರಾಗಿ ಕಾರ್ಯ ನಿರ್ವಹಿಸಲಿವೆ. ಕೃಷಿ ಅರಣ್ಯದಲ್ಲಿ ಬೆಳೆದ ನೆಡುತೋಪುಗಳು ಇಂಗಾಲವನ್ನು ಹಿಡಿದಿಡುವುದರಿಂದ ಜಾಗತಿಕವಾಗಿ ಹೆಚ್ಚುತ್ತಿರುವ ಉಷ್ಣತೆಯನ್ನು ಕಡಿಮೆಗೊಳಿಸಲು ಮತ್ತು ಸ್ಥಳೀಯವಾಗಿ ವಾತಾವರಣದ ಉಷ್ಣತೆಯನ್ನು ನಿಯಂತ್ರಿಸಲು ಪೂರಕವಾಗಲಿದೆ.

ಈ ಹಿಂದಿನ ಕಂಡಿಕೆಗಳಲ್ಲಿ ಕೃಷಿ ಅರಣ್ಯದಿಂದ ಸಾಮಾನ್ಯವಾಗಿ ದೊರೆಯುವ ಲಾಭಗಳ ಬಗ್ಗೆ ಅದರಲ್ಲೂ ರಕ್ಷಣಾತ್ಮಕ ಮತ್ತು ಉತ್ಪಾದನಾ ಅಂಶಗಳ ಬಗ್ಗೆ ತಿಳಿಸಲಾಗಿದೆ. ಇಂತಹದೇ ಅಂಶಗಳ ಅಥವಾ ಕಾರ್ಯಗಳನ್ನು ಫಾರಂ ಫಾರೆಸ್ಟ್ರಿ ಮತ್ತು ತೋಟಗಾರಿಕಾ ನೆಡುತೋಪುಗಳು ಸಹ ನಿರ್ವಹಿಸಲಿವೆ. ಏಕೆಂದರೆ ಈ ಮೂರು ಪದ್ಧತಿಗಳಲ್ಲಿ ಬಹುವಾರ್ಷಿಕ ಗಟ್ಟಿಯಾದ ಕಾಂಡವನ್ನು ಹೊಂದಿರುವ ಮರಗಳನ್ನು ಬೆಳೆಯುವುದಾಗಿದೆ. ಕೃಷಿ ಅರಣ್ಯದಲ್ಲಿ ವಿವಿಧ ಮರಗಳ ಜಾತಿಯನ್ನು ಬೆಳೆಯುವುದಾಗಿದೆ. ಆದರೆ ಫಾರಂ ಫಾರೆಸ್ಟ್ರಿ ಮತ್ತು ತೋಟಗಾರಿಕಾ ನೆಡುತೋಪುಗಳಲ್ಲಿ ಕಡಿಮೆ ಮರಗಳ ಜಾತಿಯನ್ನು ಬೆಳೆಯುವುದಾಗಿದೆ. ಏಕೆಂದರೆ ತೋಟಗಾರಿಕಾ ನೆಡುತೋಪುಗಳಲ್ಲಿ ಹಣ್ಣು ಬಿಡುವಂತಹ ಮರಗಳಿಗೆ ಪ್ರಾಧಾನ್ಯತೆಯನ್ನು ನೀಡುವುದರಿಂದ ಇಂತಹ ಮರಗಳ ರೆಂಬೆಗಳನ್ನು ಮತ್ತು ಕೊಂಬೆಗಳನ್ನು ಕತ್ತರಿಸುವುದರಿಂದ ಸ್ವಲ್ಪ ಪ್ರಮಾಣದಲ್ಲಿ ಬರುವ ಉರುವಲು ಕಟ್ಟಿಗೆಯು ನಿಯತಕಾಲಿಕವಾಗಿ ದೊರೆಯಲಿದೆ. ಆದರೆ ಮರದ ದಿಮ್ಮಿಗಳು ಅಥವಾ ಉರುವಲು ಕಟ್ಟಿಗೆಯನ್ನು ಅಂತಿಮವಾಗಿ ನೆಡುತೋಪುಗಳನ್ನು ಕಟಾವು ಮಾಡಿದಾಗ ಮಾತ್ರ ದೊರೆಯಲಿದೆ. ಕಾರಣ ನೆಡುತೋಪುಗಳಿಂದ ನಿರೀಕ್ಷಿತ ಗುಣಮಟ್ಟದ ಹಣ್ಣುಗಳು ದೊರೆಯದಿದ್ದಾಗ ಅಥವಾ ಫಲ ಬಿಡದೆ ಇದ್ದಾಗ ಇಂತಹ ನೆಡುತೋಪುಗಳನ್ನು ಕಟಾವು ಮಾಡಲಾಗುವುದು. ಈ ಮೂರು ಪದ್ಧತಿಗಳು ವಾತಾವರಣದ ರಕ್ಷಣೆಯ ದೃಷ್ಟಿಯಿಂದ ಅಂದರೆ ಮಣ್ಣಿನ ಸವಕಳಿಯನ್ನು ತಪ್ಪಿಸುವುದು ಮತ್ತು ತೇವಾಂಶ ರಕ್ಷಣೆ ಮಾಡುವುದು, ಮಣ್ಣಿನಲ್ಲಿ ಪೋಷಕಾಂಶಗಳನ್ನು ಹೆಚ್ಚಿಸಿ ಫಲವತ್ತತೆಯನ್ನು ಕಾಪಾಡುವುದು, ಸಮಸ್ಯಾತ್ಮಕ ಕೃಷಿ ಭೂಮಿಯನ್ನು ಸದುಪಯೋಗ ಪಡಿಸಿಕೊಳ್ಳುವುದು, ವಾತಾವರಣದ ಉಷ್ಣತೆಯನ್ನು ನಿಯಂತ್ರಿಸಲು ಮತ್ತು ಇಂಗಾಲವನ್ನು ಹಿಡಿದಿಡುವಂತಹ ಕಾರ್ಯಗಳು ಇತ್ಯಾದಿಗಳನ್ನು ನಿರ್ವಹಿಸಲು ಸಾಧ್ಯವಾಗುವುದು. ■

## ಕೃಷಿಅರಣ್ಯ ಸಂಸ್ಥೆಯ ಸದಸ್ಯತ್ವ

| ಸದಸ್ಯತ್ವದ ವಿವರ | ಶುಲ್ಕ (ರೂ.) |
|---|---|
| ಸಂಸ್ಥೆ ಸದಸ್ಯತ್ವ | 25,000.00 |
| ಪೋಷಕ ಸದಸ್ಯತ್ವ | 20,000.00 |
| ಅಜೀವ ಸದಸ್ಯತ್ವ | 5,000.00 |
| ಸಹ ಸದಸ್ಯತ್ವ | 2,000.00 |
| ಸಾಮಾನ್ಯ ಸದಸ್ಯತ್ವ (ಕೃಷಿಕರಿಗೆ) | 100.00 |

ಜುಲೈ 26– ಅಂತರರಾಷ್ಟ್ರೀಯ ಮ್ಯಾಂಗ್ರೂವ್ ಪರಿಸರ ವ್ಯವಸ್ಥೆ ಸಂರಕ್ಷಣಾ ದಿನ
ಜುಲೈ 28 – ವಿಶ್ವ ಪ್ರಕೃತಿ ಸಂರಕ್ಷಣೆ ದಿನ
ಜುಲೈ 29 – ಅಂತರರಾಷ್ಟ್ರೀಯ ಹುಲಿ ದಿನ
ಜುಲೈ 31 – ವಿಶ್ವ ರೇಂಜರ್ ದಿನ
ಆಗಸ್ಟ್ 10 – ವಿಶ್ವ ಸಿಂಹ ದಿನ
ಆಗಸ್ಟ್ 12 – ವಿಶ್ವ ಆನೆ ದಿನ
ಸೆಪ್ಟೆಂಬರ್ 11 – ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನ
ಸೆಪ್ಟೆಂಬರ್ 16 – ವಿಶ್ವ ಓಝೋನ್ ದಿನ
ಸೆಪ್ಟೆಂಬರ್ 18 – ವಿಶ್ವ ಬಿದಿರು ದಿನ





ಜಾಹೀರಾತು



Visit Agumbe

*Guddekeri Homestay*

***Guddekeri Post,***
***Thirthahalli Taluk,***
***Shimoga Dist.***
***Pin code - 577411***

***Mob: +91 9844737273***
***Website:***
***www.guddekerihomestay.com***
***Like us on Facebook:***
***fb.me/guddekerihomestay***

***Follow us on Instagram:***
***@guddekeri_homestay***





ಶ್ರೀ ದೀಪಕ್ ಶರ್ಮ
ಅಧ್ಯಕ್ಷರು
ಮೊ.9986232094



ಶ್ರೀ ಎನ್.ಸಂಪಂಗಿ
ಸಹ ಅಧ್ಯಕ್ಷರು
ಮೊ.9980294242



ಶ್ರೀ ಆರ್.ಎಮ್. ಪಾಲಣ್ಣ
ಉಪಾಧ್ಯಕ್ಷರು
ಮೊ.9945015617




ಶ್ರೀ ಎ.ಎಂ. ಅಣ್ಣಯ್ಯ
ಕಾರ್ಯದರ್ಶಿ
ಮೊ.9448019306



ಡಾ. ಎಂ.ಮಹದೇವ ಮೂರ್ತಿ
ಸಹ ಕಾರ್ಯದರ್ಶಿ
ಮೊ.9845588203



ಶ್ರೀ ಕೆ.ಎಸ್. ಆನಂದ್
ಖಜಾಂಚಿ
ಮೊ.9448943995



ಶ್ರೀ ಎನ್.ಡಿ. ತಿವಾರಿ
ಸದಸ್ಯರು
ಮೊ.9448360161



ಶ್ರೀ ಬಿ. ಶಿವನಗೌಡ
ಸದಸ್ಯರು
ಮೊ.9448124087



ಶ್ರೀ ಹೆಚ್.ಜಿ. ಶಿವಾನಂದಮೂರ್ತಿ
ಸದಸ್ಯರು
ಮೊ.9448126246



ಶ್ರೀ ಸಿದ್ದೇಗೌಡ
ಸದಸ್ಯರು
ಮೊ.9449244323



ಶ್ರೀ ಎಸ್. ನಾರಾಯಣಸ್ವಾಮಿ
ಸದಸ್ಯರು
ಮೊ.9880042155



ಶ್ರೀ ಬಿ.ಎಸ್. ರಘುನಾಥ
ಸದಸ್ಯರು
ಮೊ.9945003993





ಶ್ರೀ ಎಂ. ಗುರುಮೂರ್ತಿ
ಸದಸ್ಯರು
ಮೊ.9945754650



ಡಾ|| ಎನ್. ಸ್ವಾಮಿರಾವ್
ಸಹ ಸದಸ್ಯರು
ಮೊ.9880101200



ಶ್ರೀಮತಿ ಶೋಭ ಎಚ್.ಜಿ.
ಸಹ ಸದಸ್ಯರು
ಮೊ.9448945367

ಅರಣ್ಯ ಇಲಾಖೆ

# ಅರಣ್ಯ ಸಂಪತ್ತು ಜೀವಜಾಲದ ಅದ್ಭುತ ಜಗತ್ತು



**ಶ್ರೀ ಬಸವರಾಜ ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿಗಳು



ಕಾಡುಗಳು ಜೀವಿ ವೈವಿಧ್ಯತೆಯ ಬಹುದೊಡ್ಡ ಆಡಂಬೋಲ. ಜೀವವಿಕಾಸದ ಆಗರ ಮತ್ತು ತವರು ಕಾಡುಗಳೇ ಎಂಬುದು ಅವುಗಳ ಸುದೀರ್ಘ ಕಾಲದ ಅಸ್ತಿತ್ವ ಮತ್ತು ಪ್ರಾಮುಖ್ಯತೆಗೆ ಬಹುದೊಡ್ಡ ಸಾಕ್ಷಿ. ಮನುಷ್ಯ ಮೊದಲ್ಗೊಂಡು ಸೃಷ್ಟಿಯಲ್ಲಿ ಕಂಡುಬರುವ ಕೋಟ್ಯಾಂತರ ಜೀವಜಾಲಕ್ಕೆ ಆಸರೆಯಾದ ಕಾಡುಗಳು ನಾಗರಿಕತೆಯ ವಿಕಸನಕ್ಕೆ ಬಹುದೊಡ್ಡ ಕಾಣಿಕೆ ನೀಡಿವೆ. ಅರಣ್ಯ ಮತ್ತು ವನ್ಯಜೀವಿಗಳ ಮೇಲೆ ಮನುಷ್ಯನ ನಿರಂತರ ದಾಳಿಯಿಂದಾಗಿ ಎಷ್ಟೋ ಅಮೂಲ್ಯ ಸಂಪತ್ತುಗಳು ನಶಿಸಿಹೋಗಿವೆ. ಇನ್ನೂ ಕೆಲವು ವಿನಾಶದ ಅಂಚಿಗೆ ತಲುಪಿವೆ. ಇದನ್ನು ತಡೆಗಟ್ಟುವುದು, ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಕಾಡುಗಳನ್ನು ಬೆಳೆಸೋಣ,
ವನ್ಯಜೀವಿಗಳನ್ನು ರಕ್ಷಿಸೋಣ.

ನಮ್ಮ ಬದುಕನ್ನು ಸಮೃದ್ಧಗೊಳಿಸಿ,
ಸಂತಸದ ಸಿರಿಯಲ್ಲಿ ಸಾಗೋಣ.

ಅರಣ್ಯ ಸಹಾಯವಾಣಿ : 1926

Likes on

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ




ಜಾಹೀರಾತು